ಪತ್ತಿನ ಸಹಕಾರ ಚಳವಳಿ, ಸಾಮಾಜಿಕ ಮತ್ತು ಆರ್ಥಿಕ ಅಭಿವೃದ್ಧಿಗೆ ಮೀಸಲಾದ ಏಕಮಾತ್ರ ಕನ್ನಡ ಮಾಸಪತ್ರಿಕೆ

ಕರ್ನಾಟಕ ರಾಜ್ಯ ಸಹಕಾರ ಪತ್ತಿನ ಸಂಘಗಳ ಮಹಾಮಂಡಳದ ಪ್ರಕಟಣೆ

# ಸಹಕಾರ ವಾರ್ತಾಪತ್ರಿಕೆ

ಸಂಪುಟ : 3 । ಸಂಚಿಕೆ : 4 ಆಗಸ್ಟ್ : 2021 ಪುಟಗಳು : 20 । ಬೆಲೆ : 25/–







## ರಾಜ್ಯದ ನೂತನ ಮುಖ್ಯಮಂತ್ರಿಯಾಗಿ ಶ್ರೀ ಬಸವರಾಜ ಬೊಮ್ಮಾಯಿ



## ಕರ್ನಾಟಕ ರಾಜ್ಯದ ನೂತನ ರಾಜ್ಯಪಾಲರಾಗಿ ಥಾವರ್‌ಚಂದ್ ಗೆಹ್ಲೋಟ್

ಬೆಂಗಳೂರು : ರಾಜ್ಯದ ನೂತನ ರಾಜ್ಯಪಾಲರಾಗಿ ಥಾವರ್‌ಚಂದ್ ಗೆಹ್ಲೋಟ್ ನೇಮಕಗೊಂಡಿದ್ದಾರೆ. ಕರ್ನಾಟಕ ಸೇರಿದಂತೆ 8 ರಾಜ್ಯಗಳಿಗೆ ನೂತನ ರಾಜ್ಯಪಾಲರನ್ನು ನೇಮಕ ಮಾಡಿದ್ದು, ಈ ಮೂಲಕ ಕರ್ನಾಟಕದ 19ನೇ ರಾಜ್ಯಪಾಲರಾಗಿ ಗೆಹ್ಲೋಟ್ ಅಧಿಕಾರ ವಹಿಸಿಕೊಳ್ಳುವ ಮೂಲಕ ವಜುಬಾಯಿ ವಾಲಾ ಅವರ ಸ್ಥಾನವನ್ನು ಅಲಂಕರಿಸಲಿದ್ದಾರೆ.

# ಕೇಂದ್ರ ನೂತನ ಸಹಕಾರ ಸಚಿವರಾಗಿ ಅಮೀತ್ ಶಾ; ಸಹಾಯಕ ಸಚಿವರಾಗಿ ಬಿ.ಎಲ್. ವರ್ಮಾ ನೇಮಕ



ಅಮಿತ್ ಶಾ
ಕೇಂದ್ರದ ಸಹಕಾರಿ ಸಚಿವರು

**ನವದೆಹಲಿ** : ಪ್ರಧಾನಿ ನರೇಂದ್ರ ಮೊದಿ ಅವರು ಕಳೆದ ಮಾಹೆಯಲ್ಲಿ ಸಂಪುಟ ವಿಸ್ತರಣೆ ಮಾಡಿದ್ದು ರಾಜ್ಯದ ಸಂಸದರಾದ ಶೋಭಾ ಕರಂದ್ಲಾಜೆ, ಎ.ನಾರಾಯಣಸ್ವಾಮಿ, ಭಗವಂತ ಖುಬಾ ಮತ್ತು ರಾಜ್ಯಸಭಾ ಸದಸ್ಯ ರಾಜೀವ್ ಚಂದ್ರಶೇಖರ್ ಅವರುಗಳನ್ನು ಸಂಪುಟಕ್ಕೆ ಸೇರ್ಪಡೆ ಮಾಡಿದ್ದಾರೆ.

ವಿಶೇಷವಾಗಿ ಕೇಂದ್ರ ಸರ್ಕಾರವು ಕೃಷಿ ಖಾತೆಯ ಜೊತೆಗಿದ್ದ ಸಹಕಾರ ಖಾತೆಯನ್ನು ಪ್ರತ್ಯೇಕಿಸಿದ್ದಾರೆ. ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರಿಗೆ ಹೆಚ್ಚುವರಿ ಜವಾಬ್ದಾರಿ ನೀಡಿರುವ ಪ್ರಧಾನಿ ಮೋದಿ ಅವರು 'ಸಹಕಾರ' ಸಚಿವಾಲಯವನ್ನು ಪ್ರತ್ಯೇಕಿಸಿದ್ದಾರೆ. ಅಮಿತ್ ಶಾ ಅವರು ಸಹಕಾರ ಸಚಿವರಾಗಿಯೂ ಕಾರ್ಯನಿರ್ವಹಿಸುತ್ತಿದ್ದಾರೆ. ಜೊತೆಗೆ ಈಶಾನ್ಯ ರಾಜ್ಯ ಅಭಿವೃದ್ದಿ ಸಚಿವರಾಗಿದ್ದ ಬಿ.ಎಲ್.ವರ್ಮಾ ಅವರಿಗೆ ಸಹಕಾರ ಇಲಾಖೆಯ ರಾಜ್ಯ ಸಚಿವರನ್ನಾಗಿಯೂ ನೇಮಕ ಮಾಡಿರುವುದರಿಂದ ನೂತನ ಸಹಕಾರಿ ಸಚಿವಾಲಯಕ್ಕೆ ಬಲ ಬಂದಂತಾಗಿದೆ.



ಬಿ.ಎಲ್. ವರ್ಮಾ
ಸಹಾಯಕ ಸಚಿವರು

ಕೇಂದ್ರದಲ್ಲಿ ನೂತನ ಸಹಕಾರ ಸಚಿವಾಲಯ ರಚನೆಗೊಂಡಿರುವುದಕ್ಕೆ ರಾಷ್ಟ್ರದ ಸಹಕಾರಿ ಮುಖಂಡರುಗಳು ಪ್ರಧಾನಿ ಮೋದಿ, ಸಚಿವರಾದ ಅಮಿತ್ ಶಾ, ಬಿ.ಎಲ್.ವರ್ಮಾ ಅವರುಗಳನ್ನು ಅಭಿನಂದಿಸಿದ್ದಾರೆ.

## ಕೇಂದ್ರ ಸಚಿವ ಸಂಪುಟ ವಿಸ್ತರಣೆ ರಾಜ್ಯದ ನಾಲ್ವರು ಸಂಸದರು ಸಚಿವ ಸಂಪುಟಕ್ಕೆ



ಶೋಭಾ ಕರಂದ್ಲಾಜೆ
ಕೃಷಿ ಮತ್ತು ರೈತರ ಅಭಿವೃದ್ಧಿ ಸಚಿವರು



ಎ. ನಾರಾಯಣಸ್ವಾಮಿ
ಸಾಮಾಜಿಕ ನ್ಯಾಯ ಮತ್ತು ಸಬಲೀಕರಣ ಸಚಿವರು



ರಾಜೀವ್ ಚಂದ್ರಶೇಖರ್
ಕೌಶಲ ಅಭಿವೃದ್ಧಿ ಮತ್ತು ಉದ್ಯಮಶೀಲತೆ, ಎಲೆಕ್ಟ್ರಾನಿಕ್ಸ್ ಮತ್ತು ಮಾಹಿತಿ ತಂತ್ರಜ್ಞಾನ ಸಚಿವರು



ಭಗವಂತ್ ಖೂಬಾ
ಹೊಸ ಮತ್ತು ನವೀಕರಿಸಬಹುದಾದ ಇಂಧನ, ರಾಸಾಯನಿಕ ಮತ್ತು ರಸಗೊಬ್ಬರ ಸಚಿವರು



ಸಹಕಾರ ಸಂಘಗಳ ನಿಬಂಧಕರ ಕಛೇರಿಯಲ್ಲಿ ಸಹಕಾರ ಸಂಘಗಳ ಅಪರ ನಿಬಂಧಕರಾಗಿ (ವಸತಿ ಮತ್ತು ಇತರೆ) ಅಧಿಕಾರ ಸ್ವೀಕರಿಸಿರುವ ಶ್ರೀ ಕೆ.ಎಸ್.ನವೀನ್, ಕೆ.ಸಿ.ಎಸ್ ಇವರನ್ನು ಪತ್ತಿನ ಮಹಾಮಂಡಳದ ನಿರ್ದೇಶಕರುಗಳಾದ ಶ್ರೀ ಶೇಖರಗೌಡಮಾಲಿ ಪಾಟೀಲ ಮತ್ತು ಶ್ರೀ ಕೆ.ಕೆ.ಮಹೇಂದ್ರಪ್ರಸಾದ್ ಗೌಡರವರು ಅಭಿನಂದಿಸಿ ಶುಭ ಕೋರಿದರು.


## ಜಾಹಿರಾತು ಮನವಿ




ಕರ್ನಾಟಕ ರಾಜ್ಯ ಸಹಕಾರ ಪತ್ತಿನ ಸಂಘಗಳ ಮಹಾಮಂಡಳವು ಪತ್ತಿನ ಸಹಕಾರ ಚಳವಳಿ, ಸಾಮಾಜಿಕ ಮತ್ತು ಆರ್ಥಿಕ ಅಭಿವೃದ್ಧಿಗೆ ಪೂರಕವಾಗಿ ಮಾಸಿಕ ಸಹಕಾರ ಪತ್ರಿಕೆಯನ್ನು ಪ್ರಕಟ ಮಾಡುತ್ತಿದ್ದು, ಪತ್ತಿನ ಸಹಕಾರ ಚಳವಳಿಯ ಪೂರಕ ಚಟುವಟಿಕೆಗಳಿಗೆ ಪ್ರಚಾರ ನೀಡುತ್ತಾ ಬರುತ್ತಿದೆ. ರಾಜ್ಯದ ಪತ್ತಿನ ಸಹಕಾರ ಸಂಘಗಳು ತಮ್ಮ ಕಾರ್ಯಪ್ರಗತಿಯ ವಿವರಗಳನ್ನು ಜಾಹಿರಾತು ಮೂಲಕ ಪ್ರಕಟಿಸಿದ್ದಲ್ಲಿ ಉತ್ತಮ ಪ್ರಚಾರ ಪಡೆದುಕೊಳ್ಳಲು ಸಾಧ್ಯವಿದೆ. ಈ ನಿಟ್ಟಿನಲ್ಲಿ ಪತ್ತಿನ ಸಹಕಾರ ಸಂಘಗಳ ಮಹಾಮಂಡಳವು ರಿಯಾಯಿತಿ ದರದಲ್ಲಿ ಜಾಹಿರಾತುಗಳನ್ನು ಪ್ರಕಟಿಸಲು ಉತ್ಸುಕವಾಗಿದೆ. ಸಹಕಾರ ಸಂಸ್ಥೆಗಳು ಸಂಪೂರ್ಣ ಮಾಹಿತಿಗಳೊಂದಿಗೆ ಜಾಹಿರಾತುಗಳನ್ನು ನೀಡಲು ಕೋರಿದೆ. ಜಾಹಿರಾತು ದರಗಳಿಗೆ ಸಂಬಂಧಿಸಿದಂತೆ ಈ ಕೆಳಕಂಡ ದೂರವಾಣಿ ಹಾಗೂ ಮೊಬೈಲ್ ಸಂಖ್ಯೆಗಳಿಗೆ ಸಂಪರ್ಕಿಸಲು ಕೋರಿದೆ.

ಮೊಬೈಲ್ ನಂ. 9008407988, ದೂರವಾಣಿ : 080 23564444, 23464033, 23464034

ಇ–ಮೇಲ್ : ksccsfltd@gmail.com, info@ksccsf.org, ವೆಬ್‌ಸೈಟ್ : www.ksccsf.org

## ಸಹಕಾರ ವಾರ್ತಾ ಪತ್ರಿಕೆಗೆ ಚಂದಾದಾರರಾಗಲು ಮನವಿ

ಕರ್ನಾಟಕ ಸಹಕಾರ ಪತ್ತಿನ ಸಂಘಗಳ ಮಹಾಮಂಡಳವು ಪ್ರಕಟಿಸುತ್ತಿರುವ ಮಾಸಿಕ ಸಹಕಾರ ವಾರ್ತಾ ಪತ್ರಿಕೆಗೆ ಈಗಾಗಲೇ ಚಂದಾದಾರರಾಗಿರುವ ಸದಸ್ಯ ಸಹಕಾರ ಸಂಘಗಳನ್ನು ಹೊರತುಪಡಿಸಿ ಇನ್ನುಳಿದ ಪತ್ತಿನ ಸಹಕಾರ ಸಂಘಗಳು "ಸಹಕಾರ ಮಾಸಿಕ ವಾರ್ತಾ ಪತ್ರಿಕೆ"ಗೆ ಚಂದಾದಾರರಾಗಲು ಈ ಮೂಲಕ ಮನವಿ ಮಾಡಲಾಗಿದೆ.

– **ಸಂಪಾದಕರು**

SAHAKARA VARTHA PATHRIKE KANNADA MONTHLY
RNI-REG NO : KARKAN/2018/75796
POST REG NO : KNBGW-1816/2019-2021
POSTING DATE : 1 & 5. EVERY MONTH
POSTED AT : P/C RMS BHAVAN, BANGALORE PSO,
Blore-26 PUBLISHED ON : 31TH of Previous Month

# ಕರ್ನಾಟಕ ರಾಜ್ಯ ಸಹಕಾರ ಪತ್ತಿನ ಸಂಘಗಳ ಮಹಾಮಂಡಳ ನಿ., ಆಡಳಿತಮಂಡಳಿ


ಶ್ರೀಮತಿ ಕೆ. ಲಲಿತ ಜಿ.ಟಿ. ದೇವೇಗೌಡ
ಅಧ್ಯಕ್ಷರು


ಡಾ. ಬಿ.ಡಿ. ಭೂಕಾಂತ
ಉಪಾಧ್ಯಕ್ಷರು


ಶ್ರೀ ಸಿ.ಎಂ. ಮಾರೇಗೌಡ
ನಿರ್ದೇಶಕರು


ಶ್ರೀ ವಿ. ರಾಜು
ನಿರ್ದೇಶಕರು


ಡಾ. ಸಂಜಯ ಪಂ. ಹೊಸಮಠ
ನಿರ್ದೇಶಕರು


ಶ್ರೀ ಎಂ.ಜಿ. ನರೇಂದ್ರ ಕುಮಾರ
ನಿರ್ದೇಶಕರು


ಶ್ರೀ ಡಿ. ಚನ್ನಯ್ಯ
ನಿರ್ದೇಶಕರು


ಶ್ರೀ ಕೆ. ಕೃಷ್ಣಮೂರ್ತಿ
ನಿರ್ದೇಶಕರು


ಶ್ರೀ ಕೆ.ಕೆ. ಮಹೇಂದ್ರ ಪ್ರಸಾದ್‌ಗೌಡ
ನಿರ್ದೇಶಕರು


ಶ್ರೀ ಜಿ. ಮಲ್ಲಿಕಾರ್ಜುನಯ್ಯ
ನಿರ್ದೇಶಕರು


ಶ್ರೀ ತಮ್ಮಣ್ಣ ಬಿ. ಕೆಂಚರಡ್ಡಿ
ನಿರ್ದೇಶಕರು


ಶ್ರೀ ಧರೆಪ್ಪ ಎಂ. ಅಲಗೂರ
ನಿರ್ದೇಶಕರು


ಶ್ರೀ ಗುರುಪಾದಪ್ಪಗೌಡ ಬಿ. ಪಾಟೀಲ
ನಿರ್ದೇಶಕರು


ಶ್ರೀ ಹೊನ್ನಯ್ಯ ವಿ. ಹಿರೇಮಠ
ನಿರ್ದೇಶಕರು


ಶ್ರೀ ಪಿ.ಕೆ. ಜಯಕೃಷ್ಣೇಗೌಡ
ನಿರ್ದೇಶಕರು


ಶ್ರೀ ಶೇಖರಗೌಡ ಮಾಲಿ ಪಾಟೀಲ
ನಿರ್ದೇಶಕರು


ಶ್ರೀ ಹೆಚ್.ಟಿ. ನಾಗೇಶ್
ನಿರ್ದೇಶಕರು


ಶ್ರೀ ಡಿ.ಆರ್. ನಾಗೇಶಪ್ಪ
ನಿರ್ದೇಶಕರು


ಶ್ರೀ ಉಮೇಶ ಶಿ ಬಾಳಿ
ನಿರ್ದೇಶಕರು


ಶ್ರೀ ರವೀಂದ್ರ ಪ್ರಲ್ಹಾದ ಕಲಬುರ್ಗಿ
ನಿರ್ದೇಶಕರು


ಶ್ರೀ ಚಿತ್ತರಂಜನ್ ಬೋಳಾರ್
ನಿರ್ದೇಶಕರು


ಶ್ರೀ ಕೆ.ಎಸ್.ಗುರುಪ್ರಸಾದ್
ಸಲಹೆಗಾರರು


ಶ್ರೀಮತಿ ಪಿ.ಆಶಾಲತಾ
ಮುಖ್ಯಕಾರ್ಯನಿರ್ವಹಣಾಧಿಕಾರಿ (ಪ್ರ)

ಇಂದ : ಕರ್ನಾಟಕ ರಾಜ್ಯ ಸಹಕಾರ ಪತ್ತಿನ ಸಂಘಗಳ ಮಹಾಮಂಡಳ ನಿ., ಬೆಂಗಳೂರು
ನಂ.16, 1ನೇ ಮಹಡಿ, 1ನೇ ಅಡ್ಡರಸ್ತೆ, ಲಿಂಕ್ ರಸ್ತೆ, ಮಲ್ಲೇಶ್ವರಂ, ಬೆಂಗಳೂರು-560003

Printed at : Biligiri Printers
Chamrajpet, Bengaluru - 18.






**ಶ್ರೀಮತಿ ಕೆ.ಲಲಿತ ಜೆ.ಟಿ.ದೇವೇಗೌಡ**
ಅಧ್ಯಕ್ಷರು

> "ಕೇಂದ್ರ ಸರ್ಕಾರ ಕೃಷಿ ಇಲಾಖೆಯೊಂದಿಗಿದ್ದ 'ಸಹಕಾರ' ಖಾತೆಯನ್ನು ಪ್ರತ್ಯೇಕಿಸಿ "ಸಹಕಾರ ಸಚಿವಾಲಯ" ಮಾಡಿರುವುದು. ಸಹಕಾರ ಕ್ಷೇತ್ರದಲ್ಲಿ ಅನುಭವವಿರುವ ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರನ್ನು ನೇಮಿಸಿ ಜೊತೆಗೆ ಈಶಾನ್ಯ ರಾಜ್ಯಗಳ ಸಹಾಯಕ ಸಚಿವರಾಗಿದ್ದ ಬಿ.ಎಲ್. ವರ್ಮಾ ಅವರನ್ನು ಸಹಕಾರ ಖಾತೆಯ ರಾಜ್ಯ ಸಚಿವರ ಜವಾಬ್ದಾರಿಯನ್ನು ವಹಿಸಲಾಗಿದೆ. ಇದರಿಂದ ಬಹುಕಾಲದ ರಾಷ್ಟ್ರದ ಸಹಕಾರಿಗಳ ಬೇಡಿಕೆಯಾಗಿದ್ದ ಪ್ರತ್ಯೇಕ "ಸಹಕಾರ ಸಚಿವಾಲಯ" ಸ್ಥಾಪನೆಯಿಂದ ಸಹಕಾರಗಳಲ್ಲಿ ಹರ್ಷ ಹೆಚ್ಚಾದಂತಾಗಿದೆ."

# ರಾಜ್ಯದಲ್ಲಿ ನೂತನ ಮುಖ್ಯಮಂತ್ರಿಗಳು; ಕೇಂದ್ರದಲ್ಲಿ ನೂತನ ಸಹಕಾರ ಸಚಿವರು

ಬದಲಾದ ರಾಜಕೀಯ ಬೆಳವಣಿಗೆಗಳ ನಡುವೆ ಹಿರಿಯ ರಾಜಕಾರಣಿ, ಅಜಾತಶತ್ರು, ಸಹೃದಯಿ ಶ್ರೀ ಬಸವರಾಜ ಬೊಮ್ಮಾಯಿ ಅವರು ಕರ್ನಾಟಕ ರಾಜ್ಯದ ನೂತನ ಮುಖ್ಯಮಂತ್ರಿಗಳಾಗಿ ಅಧಿಕಾರ ಸ್ವೀಕರಿಸಿದ್ದಾರೆ, ಶ್ರೀಯುತರಿಗೆ ಶುಭಾಷಯಗಳು.

ತಮ್ಮ ಮೊದಲ ಸಂಪುಟ ಸಭೆಯ ನಂತರ ರೈತರ ಮಕ್ಕಳ ಉನ್ನತ ಶಿಕ್ಷಣಕ್ಕೆ ಸ್ಕಾಲರ್ ಶಿಪ್, ಸಂಧ್ಯಾ ಸುರಕ್ಷಾಯೋಜನೆ, ವಿಧವಾ ವೇತನಾ, ವಿಕಲಚೇತವರಿಗೆ ನೀಡುತ್ತಿರುವ ಮಾಸಿಕ ಹಣವನ್ನು ಹೆಚ್ಚಳ ಮಾಡಿ ದೀನರ ಉದ್ದಾರಕ್ಕೆ ಪಣತೊಟ್ಟಿದ್ದಾರೆ. ನೂತನ ಸರ್ಕಾರ ಪ್ರಸ್ತುತ ರಾಜ್ಯದಲ್ಲಿ ಹಲವೆಡೆ ಅಧಿಕ ಮಳೆಯಿಂದ ಪ್ರವಾಹ ಪರಿಸ್ಥಿತಿ, ಕೋವಿಡ್ 3ನೇ ಅಲೆ ನಿಯಂತ್ರಣಕ್ಕೆ ಕ್ರಮ ಸೇರಿದಂತೆ ಮೂಲಭೂತ ಸೌಕರ್ಯಗಳ ಅಭಿವೃದ್ದಿಗೆ ಹೆಚ್ಚು ಒತ್ತು ನೀಡಬೇಕಾಗಿದೆ.

ಕಳೆದ ಮಾಹೆಯಲ್ಲಿ ಪ್ರಧಾನಿ ನರೇಂದ್ರ ಮೋದಿ ಅವರು ಕೇಂದ್ರ ಸಂಪುಟ ವಿಸ್ತರಿಸಿ ರಾಜ್ಯದ ಸಂಸದರುಗಳಾದ ಶೋಭಾ ಕರಂದ್ಲಾಜೆ, ಎ.ನಾರಾಯಣಸ್ವಾಮಿ, ಭಗವಂತ ಖೂಬಾ ಮತ್ತು ರಾಜೀವ್‌ಚಂದ್ರಶೇಖರ್ ಅವರುಗಳಿಗೆ ಸಹಾಯಕ ಕೇಂದ್ರ ಸಚಿವರುಗಳ ಸ್ಥಾನ ಮಾನ ನೀಡಿ ಖಾತೆಗಳನ್ನು ಹಂಚಿಕೆ ಮಾಡಿದ್ದಾರೆ. ಇದರಿಂದ ಕೇಂದ್ರ ಸಂಪುಟದಲ್ಲಿ ರಾಜ್ಯದ ಪ್ರಾತಿನಿಧ್ಯ ಹೆಚ್ಚಾಗಿರುವುದು ಸಂತಸದ ವಿಚಾರವಾಗಿದೆ.

ಇದೇ ಸಮಯದಲ್ಲಿ ಕೇಂದ್ರ ಸರ್ಕಾರ ಕೃಷಿ ಇಲಾಖೆಯೊಂದಿಗಿದ್ದ 'ಸಹಕಾರ' ಖಾತೆಯನ್ನು ಪ್ರತ್ಯೇಕಿಸಿ "ಸಹಕಾರ ಸಚಿವಾಲಯ" ಮಾಡಿರುವುದು. ಸಹಕಾರ ಕ್ಷೇತ್ರದಲ್ಲಿ ಅನುಭವವಿರುವ ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರನ್ನು ನೇಮಿಸಿ ಜೊತೆಗೆ ಈಶಾನ್ಯ ರಾಜ್ಯಗಳ ಸಹಾಯಕ ಸಚಿವರಾಗಿದ್ದ ಬಿ.ಎಲ್. ವರ್ಮಾ ಅವರನ್ನು ಸಹಕಾರ ಖಾತೆಯ ರಾಜ್ಯ ಸಚಿವರ ಜವಾಬ್ದಾರಿಯನ್ನು ವಹಿಸಲಾಗಿದೆ. ಇದರಿಂದ ಬಹುಕಾಲದ ರಾಷ್ಟ್ರದ ಸಹಕಾರಿಗಳ ಬೇಡಿಕೆಯಾಗಿದ್ದ ಪ್ರತ್ಯೇಕ "ಸಹಕಾರ ಸಚಿವಾಲಯ" ಸ್ಥಾಪನೆಯಿಂದ ಸಹಕಾರಿಗಳಲ್ಲಿ ಹರ್ಷ ಹೆಚ್ಚಾದಂತಾಗಿದೆ.

ನೂತನ ಮುಖ್ಯಮಂತ್ರಿಗಳು, ಕೇಂದ್ರದ ಸಹಕಾರ ಸಚಿವರು, ಕೇಂದ್ರದಲ್ಲಿ ರಾಜ್ಯದ ಸಚಿವರುಗಳ ನೇಮಕವು ಕರ್ನಾಟಕ ರಾಜ್ಯದ ಸಮಗ್ರ ಅಭಿವೃದ್ದಿಗೆ ವಿಶೇಷವಾಗಿ ಸಹಕಾರ ಕ್ಷೇತ್ರದ ಎಲ್ಲಾ ವಲಯಗಳ ಬೆಳವಣಿಗೆಗೆ ಪೂರಕವಾಗಿ ನೆರವು ನೀಡುವರೆಂಬ ಮಹದಾಸೆಯನ್ನು ಹೊಂದಲಾಗಿದೆ.

ಕರ್ನಾಟಕ ರಾಜ್ಯ ಸಹಕಾರ ಪತ್ತಿನ ಮಹಾಮಂಡಳದ ಆಡಳಿತ ಮಂಡಳಿಯು ನೂತನ ಮುಖ್ಯಮಂತ್ರಿಗಳು, ಕೇಂದ್ರ ಸಚಿವರುಗಳನ್ನು ವಿಶೇಷವಾಗಿ ಪ್ರಧಾನಿ ನರೇಂದ್ರ ಮೋದಿ ಅಮಿತ್ ಶಾ ಅವರಿಗೂ ತುಂಬು ಹೃದಯದಿಂದ ಅಭಿನಂದನೆ ಶುಭಾಷಯಗಳನ್ನು ಈ ಮೂಲಕ ಸಲ್ಲಿಸುತ್ತಿದೆ.

ಪತ್ತಿನ ಸಹಕಾರ ಚಳವಳಿ, ಸಾಮಾಜಿಕ ಮತ್ತು ಆರ್ಥಿಕ ಅಭಿವೃದ್ಧಿಗೆ ಮೀಸಲಾದ ಏಕಮಾತ್ರ ಕನ್ನಡ ಮಾಸಪತ್ರಿಕೆ

ಸಹಕಾರ

ಕರ್ನಾಟಕ ರಾಜ್ಯ ಸಹಕಾರ ಪತ್ತಿನ ಸಂಘಗಳ ಮಹಾಮಂಡಳದ ಪ್ರಕಟಣೆ

**ಕರ್ನಾಟಕ ರಾಜ್ಯ ಸಹಕಾರ ಪತ್ತಿನ ಸಂಘಗಳ ಮಹಾಮಂಡಳ ನಿ., ಬೆಂಗಳೂರು**

ನಂ. 16, 1ನೇ ಮಹಡಿ, 1ನೇ ಅಡ್ಡರಸ್ತೆ, ಲಿಂಕ್‌ರಸ್ತೆ,
ಮಲ್ಲೇಶ್ವರಂ, ಬೆಂಗಳೂರು – 560003
ದೂರವಾಣಿ ಸಂಖ್ಯೆ :
080–23564444 / 23464033 / 23464034
ಇ–ಮೇಲ್ : info@ksccsf.org
ksccsfltd@gmail.com, ವೆಬ್ : www.ksccsf.org

**ಸಂಪಾದಕ ಮಂಡಳಿ**

ಅಧ್ಯಕ್ಷರು / ಪ್ರಧಾನ ಸಂಪಾದಕರು :
**ಶ್ರೀಮತಿ ಕೆ. ಲಲಿತ ಜಿ.ಟಿ. ದೇವೇಗೌಡ**

ಉಪಾಧ್ಯಕ್ಷರು / ಕಾರ್ಯನಿರ್ವಾಹಕ ಸಂಪಾದಕರು :
**ಡಾ. ಬಿ.ಡಿ. ಭೂಕಾಂತ**

ಉಪಸಂಪಾದಕರು :
**ಶ್ರೀ ಕೆ.ಕೆ. ಮಹೇಂದ್ರ ಪ್ರಸಾದ್ ಗೌಡ**

ಸದಸ್ಯರು :
**ಶ್ರೀ ಕೆ. ಕೃಷ್ಣಮೂರ್ತಿ, ಶ್ರೀ ಜಿ. ಮಲ್ಲಿಕಾರ್ಜುನಯ್ಯ**
**ಶ್ರೀ ಹೆಚ್.ಟಿ. ನಾಗೇಶ್, ಶ್ರೀ ಚಿತ್ತರಂಜನ್ ಬೋಳಾರ್**

ಸಲಹೆಗಾರರು : **ಶ್ರೀ ಕೆ.ಎಸ್. ಗುರುಪ್ರಸಾದ್**

**ಶ್ರೀಮತಿ ಪಿ. ಆಶಾಲತಾ**
ಮುಖ್ಯಕಾರ್ಯನಿರ್ವಹಣಾಧಿಕಾರಿ (ಪ್ರಭಾರ)

# ಕೇಂದ್ರದಲ್ಲಿ ಸಹಕಾರ ಸಚಿವಾಲಯ–ಸ್ವಾಗತ



ಕೇಂದ್ರ ಸರ್ಕಾರದಿಂದ ಪ್ರತ್ಯೇಕ ಸಹಕಾರ ಸಚಿವಾಲಯ ಸ್ಥಾಪನೆಯಾಗಿದ್ದು ರಾಜ್ಯದ ಸಹಕಾರಿಗಳ ಕನಸು ನನಸಾಗಿದೆ. ಬಹುದಿನದ ಬೇಡಿಕೆಯನ್ನು ಈಡೇರಿಸಿದ ಪ್ರಧಾನಿ ಶ್ರೀ ನರೇಂದ್ರಮೋದಿ ಅವರಿಗೆ ಕರ್ನಾಟಕ ರಾಜ್ಯ ಸಹಕಾರ ಪತ್ತಿನ ಸಂಘಗಳ ಮಹಾಮಂಡಳದ ನಿರ್ದೇಶಕರಾದ ಡಾ॥ಸಂಜಯ ಪಿ ಹೊಸಮಠ ರವರು ಅಭಿನಂದನೆ ಸಲ್ಲಿಸಿದ್ದಾರೆ.

2020ರ ರಾಷ್ಟ್ರೀಯ ಸಹಕಾರ ಒಕ್ಕೂಟ ನವದೆಹಲಿ NCUI (National Co operative Union of India) ಇದರ ವಾರ್ಷಿಕ ಸರ್ವ ಸಾಧಾರಣ ಸಭೆಯಲ್ಲಿ ಮಹಾಮಂಡಳದಿಂದ ನಿರ್ದೇಶಕರ ನಿಯೋಗದಲ್ಲಿ ಡಾ॥ ಸಂಜಯ ಪಿ ಹೊಸಮಠರವರು ಭಾಗಿಯಾಗಿ ಕೇಂದ್ರದಲ್ಲಿ ಪ್ರತ್ಯೇಕ ಸಹಕಾರ ಸಚಿವಾಲಯದ ಅಗತ್ಯವಿದ್ದ ವಿಷಯ ಮಂಡನೆ ಮಾಡಿ ಮನವಿ ಸಲ್ಲಿಸಿದ್ದನ್ನು ಇಲ್ಲಿ ಸ್ಮರಿಸಬಹುದು.

2020ರಲ್ಲಿ ಪತ್ತಿನ ಮಹಾಮಂಡಳದ ನಿರ್ದೇಶಕರುಗಳಾದ ಶ್ರೀ ವಿ.ರಾಜುರವರು, ಡಾ. ಸಂಜಯ ಪಿ ಹೊಸಮಠರವರು, ಶ್ರೀ ಹೆಚ್.ಟಿ.ನಾಗೇಶ್ ರವರು ಮತ್ತು ಶ್ರೀ ಚಿತ್ತರಂಜನ್ ಬೋಳಾರ್ ರವರ ನಿಯೋಗದೊಂದಿಗೆ ಕೇಂದ್ರ ವಿತ್ತ ಸಚಿವಾಲಯ, ಕೃಷಿ ಹಾಗೂ ಸಹಕಾರ ಸಚಿವಾಲಯ ಮತ್ತು ಕೇಂದ್ರ ನೇರ ತೆರಿಗೆ ವಿಭಾಗದ CBDT (Central Board of Direct Taxses) ಕಛೇರಿಗಳಿಗೆ ಭೇಟಿ ನೀಡಿ ಕೇಂದ್ರದಲ್ಲಿ ಪ್ರತ್ಯೇಕ ಸಹಕಾರ ಸಚಿವಾಲಯದ ಬೇಡಿಕೆಯ ಮನವಿಯನ್ನು ಆಯಾ ವಿಭಾಗದ ಮುಖ್ಯಸ್ಥರಿಗೆ ಸಲ್ಲಿಸಿದ್ದನ್ನು ಇಲ್ಲಿ ಸ್ಮರಿಸಬಹುದು.

**ಸುಭಾಷಿತ :** ಮಾನವ ಸಂಪನ್ಮೂಲ ಅಭಿವೃದ್ಧಿಯ ಸಲುವಾಗಿ ಹೂಡಿಕೆ ಮಾಡದೆ ಸಾಧಿಸಿದ ಬೆಳವಣಿಗೆಯು ಸುಸ್ಥಿರವಲ್ಲದ್ದು ಮತ್ತು ಅನೈತಿಕವಾದುದು – ಅಮರ್ತ್ಯಸೇನ್

ಸಹಕಾರ ವಾರ್ತಾ ಪತ್ರಿಕೆ ಚಂದಾದಾರರಾಗ ಬಯಸುವವರು ಚಂದಾ ಹಣವನ್ನು "ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು, ಕರ್ನಾಟಕ ರಾಜ್ಯ ಸಹಕಾರ ಪತ್ತಿನ ಸಂಘಗಳ ಮಹಾಮಂಡಳ ನಿ., ಬೆಂಗಳೂರು" ಇವರ ಹೆಸರಿಗೆ ಚೆಕ್ ಅಥವಾ ಡಿಡಿಯನ್ನು ಬರೆದು ಕಳುಹಿಸಬೇಕಾಗಿ ವಿನಂತಿ. - ಸಿ.ಇ.ಒ.
ಐದು ವರ್ಷಗಳ ಚಂದಾ: ರೂ : 1500/-

**ಸೂಚನೆ :**
ಈ ಪತ್ರಿಕೆಯಲ್ಲಿ ಪ್ರಕಟವಾಗುವ ಲೇಖನಗಳಲ್ಲಿನ ಅನಿಸಿಕೆ, ಅಭಿಪ್ರಾಯಗಳು ಆಯಾ ಬರಹಗಾರರದೇ ಆಗಿರುತ್ತದೆ ವಿನಃ ಪತ್ರಿಕೆ / ಮಹಾಮಂಡಳದ ವಿಚಾರಗಳಾಗಿರುವುದಿಲ್ಲ.
- ಸಂಪಾದಕರು,
ಸಹಕಾರ ವಾರ್ತಾ ಪತ್ರಿಕೆ.

# ಕರ್ನಾಟಕ ರಾಜ್ಯದ ನೂತನ ಮುಖ್ಯಮಂತ್ರಿಯಾಗಿ ಶ್ರೀ ಬಸವರಾಜ ಬೊಮ್ಮಾಯಿ

**ದೀನ ದಲಿತರ ಕಲ್ಯಾಣಕ್ಕೆ ಒತ್ತು, ವಿಶ್ವಾಸಾರ್ಹ, ದಕ್ಷ, ಪ್ರಾಮಾಣಿಕ, ಜನಪರ ಆಡಳಿತ ನೀಡುವುದು ನನ್ನ ಸರ್ಕಾರದ ಆದ್ಯತೆ ಎಂದ ನೂತನ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ**



**ಬೆಂಗಳೂರು : ಕರ್ನಾಟಕ ರಾಜ್ಯದ ನೂತನ ಮುಖ್ಯಮಂತ್ರಿಯಾಗಿ ಬಸವರಾಜ ಬೊಮ್ಮಾಯಿ ರವರು ರಾಜಭವನದ ಗಾಜಿನ ಮನೆಯಲ್ಲಿ ಪ್ರಮಾಣವಚನ ಸ್ವೀಕರಿಸಿದರು. ರಾಜ್ಯಪಾಲ ಥಾವರ್‌ಚಾಂದ ಗೆಹ್ಲೋಟ್ ಅವರು ಪ್ರಮಾಣವಚನ ಬೋಧಿಸಿದರು. ರಾಜ್ಯ ಸರ್ಕಾರದ ಮುಖ್ಯಕಾರ್ಯದರ್ಶಿ ಪಿ. ರವಿಕುಮಾರ್ ಕಾರ್ಯಕ್ರಮ ನಡೆಸಿಕೊಟ್ಟರು.**

## ರೈತರ ಮಕ್ಕಳ ಉನ್ನತ ಶಿಕ್ಷಣಕ್ಕೆ ರೂ. 1,000 ಕೋಟಿ, ಸಂಧ್ಯಾ ಸುರಕ್ಷಾ, ವಿಧವಾ ವೇತನ ರೂ. 200 ಹೆಚ್ಚಳ


## ದೀನದಲಿತರ ಕಲ್ಯಾಣ : ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ

**ಬೆಂಗಳೂರು :** ದಿನಾಂಕ : 28.7.2021 ರಂದು ಕರ್ನಾಟಕ ರಾಜ್ಯದ ನೂತನ ಮುಖ್ಯಮಂತ್ರಿಯಾಗಿ ಪದಗ್ರಹಣ ಮಾಡಿದ ಬಸವರಾಜ ಬೊಮ್ಮಾಯಿ ಅವರು ಮೊದಲ ದಿನವೇ ನಡೆಸಿದ ಚೊಚ್ಚಲ ಸಂಪುಟ ಸಭೆಯಲ್ಲಿ ರೈತರು, ಹಿರಿಯರು, ವಿಧವೆಯರು ಮತ್ತು ಅಂಗವಿಕಲರಿಗೆ ಆದ್ಯತೆ ನೀಡುವ ನಿರ್ಣಯ ಕೈಗೊಳ್ಳುವ ಮೂಲಕ ತಮ್ಮ ಆಡಳಿತದ ದಿಕ್ಸೂಚಿ ಏನಿರಲಿದೆ ಎಂದು ಸೂಚ್ಯವಾಗಿ ತೋರಿಸಿದ್ದಾರೆ.

ರಾಜಭವನದಲ್ಲಿ ಬುಧವಾರ ನಡೆದ ಪ್ರಮಾಣ ವಚನ ಸ್ವೀಕಾರ ಸಮಾರಂಭದ ಬಳಿಕ, ವಿಧಾನಸೌಧಕ್ಕೆ ಬಂದ ಅವರು ಒಬ್ಬರೇ ಸಚಿವ ಸಂಪುಟ ಸಭೆ ನಡೆಸಿದರು. ನಿಕಟ ಪೂರ್ವ ಮುಖ್ಯಮಂತ್ರಿ ಯಡಿಯೂರಪ್ಪ ನೇತೃತ್ವದ ಸಚಿವ ಸಂಪುಟದಲ್ಲಿ ಗೃಹ ಮತ್ತು ಕಾನೂನು ಸಚಿವರಾಗಿ ಸಚಿವ ಸಂಪುಟ ಸಭೆಯ ನಿರ್ಣಯಗಳನ್ನು ಸುದ್ದಿಗಾರರಿಗೆ ವಿವರಿಸುತ್ತಿದ್ದ ಅವರು, ಮುಖ್ಯಮಂತ್ರಿಯಾಗಿ ಸುದ್ದಿಗೋಷ್ಠಿ ನಡೆಸಿದ್ದು ವಿಶೇಷವಾಗಿತ್ತು. 'ರಾಜ್ಯದ ರೈತರ ಮಕ್ಕಳು ಹೆಚ್ಚಿನ ಸಂಖ್ಯೆಯಲ್ಲಿ ಉನ್ನತ ಶಿಕ್ಷಣ ಪಡೆಯಲು ಪ್ರೋತ್ಸಾಹ ನೀಡುವ ಉದ್ದೇಶದಿಂದ ಹೊಸದಾಗಿ ಶಿಷ್ಯ ವೇತನ ನೀಡಲು ತೀರ್ಮಾನಿಸಿದ್ದು, ಇದಕ್ಕಾಗಿ ರೂ. 1,000 ಕೋಟಿ ಹೆಚ್ಚುವರಿ ಹಣ ಮೀಸಲಿಡಲು ನಿರ್ಧರಿಸಲಾಗಿದೆ' ಎಂದರು.

ರೈತರ ಮಕ್ಕಳು ವಿದ್ಯೆ ಮತ್ತು ಉನ್ನತ ಶಿಕ್ಷಣದಿಂದ ವಂಚಿತರಾಗಬಾರದು. ಅವರು ಸಮಾಜದ ಮುಖ್ಯವಾಹಿನಿಗೆ ಬರಬೇಕು ಎಂಬ ಕಾರಣಕ್ಕೆ ಈ ಕಾರ್ಯಕ್ರಮ ಘೋಷಿಸಿದ್ದು, ಮುಂಬರುವ ದಿನಗಳಲ್ಲಿ ವಿಸ್ತೃತ ಮಾಹಿತಿ ನೀಡಲಾಗುವುದು ಎಂದು ಬಸವರಾಜ ಬೊಮ್ಮಾಯಿ ಹೇಳಿದರು.

# ಎಸ್.ಟಿ. ಸೋಮಶೇಖರ್ ಅವರ ಸಹಕಾರ ವರದಿಗೆ ಅಮಿತ್ ಷಾ ಪ್ರಶಂಸೆ





**ಬೆಂಗಳೂರು :** ಕರ್ನಾಟಕದಲ್ಲಿ ಸಹಕಾರ ಇಲಾಖೆಯ ಹಾಗೂ ಸಚಿವರಾಗಿ ಕಾರ್ಯ ನಿರ್ವಹಿಸಿದ್ದ ಎಸ್.ಟಿ. ಸೋಮಶೇಖರ್ ಅವರ ಕಾರ್ಯವೈಖರಿಯನ್ನು ಕೇಂದ್ರ ಗೃಹಮಂತ್ರಿಗಳು ಹಾಗೂ ಸಹಕಾರ ಸಚಿವರೂ ಆದ ಅಮಿತ್ ಷಾ ಅವರು ಶ್ಲಾಘಿಸಿದ್ದಾರೆ.

ಅಲ್ಲದೆ, ಜೊತೆಯಾಗಿ ದೇಶದಲ್ಲಿ ಸಹಕಾರಿ ಕ್ಷೇತ್ರವನ್ನು ಉತ್ತುಂಗಕ್ಕೆ ಕೊಂಡೊಯ್ಯುವ ಬಗ್ಗೆ ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ. ಕೇಂದ್ರ ಸರ್ಕಾರ ಈಚೆಗಷ್ಟೇ ಸಹಕಾರ ಸಚಿವಾಲಯವನ್ನು ಸ್ಥಾಪಿಸಿದ ಸಂದರ್ಭದಲ್ಲಿ ಕರ್ನಾಟಕದಲ್ಲಿನ ಸಹಕಾರ ವಲಯಕ್ಕೆ ಸಂಬಂಧಪಟ್ಟಂತೆ ಸಹಕಾರ ಸಚಿವರಾಗಿದ್ದ ಎಸ್.ಟಿ. ಸೋಮಶೇಖರ್ ಅವರು ಅಮಿತ್ ಷಾ ಅವರಿಗೆ ವರದಿ ಸಲ್ಲಿಸಿದ್ದರು. ಇದಕ್ಕೆ ಪ್ರತಿಕ್ರಿಯೆ ನೀಡಿರುವ ಕೇಂದ್ರ ಗೃಹ ಸಚಿವರು, ಕರ್ನಾಟಕದಲ್ಲಿ ಸಹಕಾರ ಸಚಿವರಾಗಿ ಕಾರ್ಯನಿರ್ವಹಣೆ ಮಾಡುತ್ತಿರುವ ನಿಮಗೆ ನಾನು ಅಭಿನಂದನೆಯನ್ನು ಸಲ್ಲಿಸುತ್ತೇನೆ ಎಂದು ತಿಳಿಸಿದ್ದಾರೆ.

ಕೇಂದ್ರ ಸರ್ಕಾರದ ಮಹತ್ವಾಕಾಂಕ್ಷಿ ಯೋಜನೆಯಾದ "ಸಹಕಾರದಿಂದ ಸಮೃದ್ಧಿ" (ಸಹಕಾರ್ ಸೇ ಸಮೃದ್ಧಿ) ಬಗ್ಗೆಯೂ ಪತ್ರದಲ್ಲಿ ಉಲ್ಲೇಖಿಸಿದ್ದು, ಇದರ ಮೂಲಕ ಎಲ್ಲ ವರ್ಗದ ಜನರನ್ನೂ ತಲುಪಬೇಕು. ಸಹಕಾರ ಕ್ಷೇತ್ರದ ಮೂಲಕ ಕೃಷಿ ಹಾಗೂ ಗ್ರಾಮೀಣ ಭಾಗದ ಅಭಿವೃದ್ಧಿಯಾಗಲಿದೆ. ಅಲ್ಲದೆ, ಭಾರತದ ಸಹಕಾರಿ ಕ್ಷೇತ್ರವನ್ನು ಇನ್ನಷ್ಟು ಎತ್ತರಕ್ಕೆ ಕೊಂಡೊಯ್ಯಲಿದೆ ಎಂಬ ವಿಶ್ವಾಸ ನನಗಿದೆ. ಸಹಕಾರ ವಲಯವು ಮತ್ತಷ್ಟು ವೃದ್ಧಿಯಾಗಬೇಕು. ಜೊತೆಗೆ ಇನ್ನಷ್ಟು ವಿಸ್ತರಣೆ ಮಾಡಬೇಕಿದೆ. ನಿಮ್ಮ ಯೋಜನೆ ಹಾಗೂ ಕಾರ್ಯಕ್ರಮಗಳಿಗೆ ನನ್ನ ಸಹಕಾರ ಸದಾ ಇರಲಿದೆ. ಸಹಕಾರ ವಲಯದ ಮೂಲಕ ಅಭಿವೃದ್ಧಿಯ ಪರ್ವ ಕಾಣಬೇಕು ಎಂಬ ನಿಮ್ಮ ಆಶಯಕ್ಕೆ ನಾನು ಅಭಿನಂದನೆ ಸಲ್ಲಿಸುತ್ತೇನೆ ಎಂದು ಅಮಿತ್ ಷಾ ಅವರು ತಿಳಿಸಿದ್ದಾರೆ.

## ವರ್ಷದಲ್ಲಿ ಸಹಕಾರ ಇಲಾಖೆ ದೊಡ್ಡ ಸಾಧನೆ : ಎಸ್.ಟಿ. ಸೋಮಶೇಖರ್



**ಬೆಂಗಳೂರು:** ಸಹಕಾರ ಇಲಾಖೆ ಸಚಿವನಾಗಿ ಕೊರೋನಾ ಸಂಕಷ್ಟದ ಕಾಲದಲ್ಲಿ ಸರ್ಕಾರಕ್ಕೆ ಆರ್ಥಿಕ ಬಲ ತುಂಬುವುದರ ಜೊತೆಗೆ ರೈತರು ಹಾಗೂ ವರ್ತಕರ ನೆರವಿಗೆ ಧಾವಿಸಿ ಪ್ರಾಮಾಣಿಕವಾಗಿ ದುಡಿದಿರುವ ಸಾರ್ಥಕ ಭಾವ ಹೊಂದಿದ್ದೇನೆ ಎಂದು ಸಹಕಾರ ಸಚಿವ ಹಾಗೂ ಮೈಸೂರು ಜಿಲ್ಲಾ ಉಸ್ತುವಾರಿ ಸಚಿವರಾಗಿದ್ದ ಎಸ್.ಟಿ. ಸೋಮಶೇಖರ್ ಹೇಳಿದ್ದಾರೆ.

ಅಲ್ಲದೆ, ಅವಕಾಶ ನೀಡಿದ – ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಹಾಗೂ ವರಿಷ್ಠರಿಗೆ ಆಭಾರಿಯಾಗಿದ್ದೇನೆ ಎಂದು ಧನ್ಯವಾದ ಸಲ್ಲಿಸಿದ್ದಾರೆ. ಈ ಬಗ್ಗೆ ಪತ್ರಿಕಾ ಹೇಳಿಕೆ ನೀಡಿರುವ ಅವರು, ಸಹಕಾರ ಇಲಾಖೆಯಿಂದ ಕೊರೋನಾ ಸಂಕಷ್ಟದಲ್ಲಿ ರೈತರು, ವರ್ತಕರಿಗೆ ಸಾಲ–ಸೌಲಭ್ಯಗಳ ಮೂಲಕ ಸ್ವಾವಲಂಬನೆ ಸಾಧಿಸಲು ಅನುಕೂಲ ಮಾಡಿಕೊಡಲಾಯಿತು. ವರ್ಷಕ್ಕೆ 2 ಕಾರ್ಯಕ್ರಮಗಳಿಗೆ ಮಾತ್ರವೇ ಸೀಮಿತ ಎಂಬಂತೆ ಇದ್ದ ಸಹಕಾರ ಇಲಾಖೆಯಲ್ಲಿ ಎಷ್ಟೆಲ್ಲ ಜನಪರ ಕಾರ್ಯಕ್ರಮಗಳನ್ನು ರೂಪಿಸಬಹುದು ಎಂದು ತೋರಿಸಿ ಇಲಾಖೆಯ ನಿಜವಾದ ಶಕ್ತಿಸಾಮರ್ಥ್ಯ ತೋರಿಸಿಕೊಟ್ಟಿದ್ದೇವೆ ಎಂದು ಸಂತಸವ್ಯಕ್ತಪಡಿಸಿದರು.

## ಉಚಿತ ಆಯುಷ್ಮಾನ್ ಭಾರತ್ ಆರೋಗ್ಯ ಕರ್ನಾಟಕ ಕಾರ್ಡ್ ವಿತರಣೆ



ಆತ್ಮಶಕ್ತಿ ವಿವಿಧೋದ್ದೇಶ ಸಹಕಾರಿ ಸಂಘದ ತುಂಬೆ ಶಾಖೆಯಲ್ಲಿ ಉಚಿತ ಆಯುಷ್ಮಾನ್ ಭಾರತ್ ಆರೋಗ್ಯ ಕರ್ನಾಟಕ ಕಾರ್ಡ್ ವಿತರಣಾ ಕಾರ್ಯಕ್ರಮವು ನಡೆಯಿತು. ಸಂಘದ ಸದಸ್ಯರಾದ ಶ್ರೀಮತಿ ರಾಜೀವಿ ಹಾಗೂ ಬಿ.ಸದಾನಂದ್‌ರವರು ಕಾರ್ಯಕ್ರಮವನ್ನು ಉದ್ಘಾಟಿಸಿದರು. ಬಿ.ಸದಾನಂದ್‌ರವರು ಮಾತನಾಡಿ ತುಂಬೆ ಪರಿಸರದ ಜನರಿಗೆ ಸಹಕಾರಿಯಾಗಲಿದೆ ಎಂದರು.

ಕಾರ್ಯಕ್ರಮದ ಅಧ್ಯಕ್ಷತೆಯನ್ನು ವಹಿಸಿದ್ದ ಸಂಘದ ಅಧ್ಯಕ್ಷರಾದ ಚಿತ್ತರಂಜನ್ ಬೋಳಾರ್ ಮಾತನಾಡಿ 18ನೇ ನೂತನ ತುಂಬೆ ಶಾಖೆಯ ಪ್ರಾರಂಭದ ಪ್ರಯುಕ್ತ ಆಯುಷ್ಮಾನ್ ಭಾರತ್ ಆರೋಗ್ಯ ಕರ್ನಾಟಕ ಕಾರ್ಡನ್ನು ಉಚಿತವಾಗಿ ಸಂಘದ ಸದಸ್ಯರಿಗೆ ಹಾಗೂ ಸಾರ್ವಜನಿಕರಿಗೆ ಆಯೋಜಿಸಿದ್ದು ಎಲ್ಲರೂ ಇದರ ಸದುಪಯೋಗವನ್ನು ಪಡೆಯುವಂತೆ ಮನವಿ ಮಾಡಿದರು.

ಸಂಘದ ನಿರ್ದೇಶಕರಾದ ವಾಮನ್ ಕೆ., ಸೀತಾರಾಮ್ ಎನ್., ಸುರೇಶ್ ವಿ. ಪೂಜಾರಿ, ರಮಾನಾಥ್ ಸನಿಲ್, ಚಂದ್ರಹಾಸ್ ಮರೋಳಿ ಹಾಗೂ ಶ್ರೀಮತಿ ಸುಜಯ ಹೇಮಚಂದ್ರ ಉಪಸ್ಥಿತರಿದ್ದರು, ಸಂಘದ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಶ್ರೀಮತಿ ಸೌಮ್ಯಾ ವಿಜಯ್ ಸ್ವಾಗತಿಸಿದರು, ಲೆಕ್ಕಿಗ ವಿಶ್ವನಾಥ್ ವಂದಿಸಿದರು, ನಿತಿನ್ ಕಾರ್ಯಕ್ರಮವನ್ನು ನಿರೂಪಿಸಿದರು.

## ಮಳವಳ್ಳಿಯಲ್ಲಿ ಇ-ಸ್ಟಾಂಪಿಂಗ್ ಉಪಕೇಂದ್ರದ ಉದ್ಘಾಟನಾ ಸಮಾರಂಭ



ದಿನಾಂಕ : 26/07/2021 ರಂದು ಸೋಮವಾರ ಮಳವಳ್ಳಿ, ಪೂರ್ಣ ಪ್ರಜ್ಞಾ ಕ್ರೆಡಿಟ್ ಕೋ–ಆಪರೇಟಿವ್ ಸೊಸೈಟಿ ಲಿ., ಮಳವಳ್ಳಿ. ಇದರ ಇ–ಸ್ಟಾಂಪಿಂಗ್ ಉಪಕೇಂದ್ರದ ಉದ್ಘಾಟನೆಯನ್ನು ಮಳವಳ್ಳಿ ಉಪವಿಭಾಗದ ಪೋಲಿಸ್ ಉಪಅಧೀಕ್ಷಕರಾದ ಶ್ರೀ ಲಕ್ಷ್ಮೀ ನಾರಾಯಣ ಪ್ರಸಾದ್‌ರವರು ನೆರವೇರಿಸಿದರು.

ಆ ನಂತರ ಮಾತನಾಡಿ ಈ ಸಹಕಾರ ಸಂಘದ ಇ–ಸ್ಟಾಂಪಿಂಗ್ ಉಪಕೇಂದ್ರವನ್ನು ಯಶಸ್ವಿಯಾಗಿ ನಡೆಸುವ ಮೂಲಕ ಸದಸ್ಯರಿಗೆ ಉತ್ತಮ ಸೇವೆಯನ್ನು ನೀಡುವಂತೆ ಕರೆ ನೀಡಿದರು.

ಮುಖ್ಯ ಅತಿಥಿಗಳಾಗಿ ಶ್ರೀ ವಿ.ಪಿ. ನಾಗೇಶ್ ಮಾಜಿ ತಾಲ್ಲೂಕು ಪಂಚಾಯಿತಿ ಅಧ್ಯಕ್ಷರು, ಶ್ರೀ ಸಿ.ಎಸ್. ಸೋಮೇಗೌಡರು ಸಹಕಾರ ಸಂಘದ ಅಧ್ಯಕ್ಷರು, ಶ್ರೀ ಕೆ.ಎಸ್.ಗುರುಪ್ರಸಾದ್, ಸಲಹೆಗಾರರು ಕರ್ನಾಟಕ ರಾಜ್ಯ ಪತ್ತಿನ ಸಹಕಾರ ಮಹಾಮಂಡಳ ಬೆಂಗಳೂರು. ಶ್ರೀ ಡಿ. ಬಸವರಾಜೇ ಅರಸ್ ಮಾಜಿ ಪುರಸಭಾ ಸದಸ್ಯರು ಭಾಗವಹಿಸಿದ್ದರು. ಸಭೆಯಲ್ಲಿ ನಿರ್ದೇಶಕರಾದ ಶ್ರೀ ರಾಜಣ್ಣ, ಶ್ರೀ ಎಂ.ಬಿ. ಮಂಜೇಶ್ ಶ್ರೀ ಶಿವಣ್ಣ ಉಪಾಧ್ಯಾಕ್ಷರಾದ ಟಿ.ಆರ್. ಸೋಮೇಗೌಡ ಶ್ರೀ ವಿ.ಎಂ. ವಿಶ್ವನಾಥ್ , ರಾಜು, ಸುಜಾತ, ಕೃಷ್ಣ, ಶ್ರೀಮತಿ ರೇಖಾ ಹಾಗೂ ಎಂ.ಬಿ. ಮಂಜೇಶ್ ರವರು ಹಾಜರಿದ್ದರು. ಕೊನೆಯಲ್ಲಿ ಶ್ರೀ ಶಿವನಂಜು ರವರು ವಂದಿಸಿದರು.

## ಸಹಕಾರ ಚುನಾವಣಾ ಪ್ರಾಧಿಕಾರ

ಟಿ.ಟಿ.ಎಂ.ಸಿ.ಕಟ್ಟಡ, 3ನೇ ಮಹಡಿ, ಶ್ರೀ ಕೆಂಗಲ್ ಹನುಮಂತಯ್ಯ ರಸ್ತೆ, ಶಾಂತಿನಗರ, ಬೆಂಗಳೂರು–560027.

E-mail : coeckarnataka@gmail.com Phone : 080-22220066 / 29709014

ಸಂಖ್ಯೆ : ಸಚುಪ್ರಾ/ಆಡಳಿತ/ಕೋವಿಡ್–19/ 6(3) /ಸುತ್ತೋಲೆ/2021 ದಿನಾಂಕ : 19.07.2021

### ಸುತ್ತೋಲೆ

ವಿಷಯ : ಆಡಳಿತ ಮಂಡಳಿಯ ನಿರ್ದೇಶಕರ ಸ್ಥಾನಗಳಿಗೆ ಚುನಾವಣೆ ನಡೆದಿರುವ ಸಹಕಾರ ಸಂಘಗಳ ಅಧ್ಯಕ್ಷರು/ಉಪಾಧ್ಯಕ್ಷರು/ ಆಕಸ್ಮಿಕವಾಗಿ ತೆರವಾದ ಪದಾಧಿಕಾರಿಗಳ ಸ್ಥಾನಗಳಿಗೆ ಚುನಾವಣೆ ನಡೆಸುವ ಬಗ್ಗೆ.

ಉಲ್ಲೇಖ : 1) ಈ ಕಛೇರಿಯ ಸುತ್ತೋಲೆ ಸಂಖ್ಯೆ:ಸಚುಪ್ರಾ/ಆಡಳಿತ/ಕೋವಿಡ್–19/6(1)/ಸುತ್ತೋಲೆ/202 ದಿನಾಂಕ 26.04.2021.

2) ಈ ಕಛೇರಿಯ ಸುತ್ತೂಲೆ ಸಂಖ್ಯೆ: ಸಚುಪ್ರಾ/ಆಡಳಿತ/ ಕೋವಿಡ್–19/6(2)/ಸುತ್ತೂಲೆ/2021 ದಿನಾಂಕ 21.06.2021

3) ಸಹಕಾರ ಸಂಘಗಳ ಉಪ ನಿಬಂಧಕರು, ಬೆಳಗಾವಿ ಜಿಲ್ಲೆ, ಬೆಳಗಾವಿ ಇವರ ಪತ್ರ ಸಂಖ್ಯೆ : ಡಿಆರ್‌ಎಲ್/ ಚುನಾವಣೆ/29/2021–22 ದಿನಾಂಕ 24.06.2021.

4) ಸಹಕಾರ ಸಂಘಗಳ ಉಪ ನಿಬಂಧಕರು, ಮಂಡ್ಯ ಜಿಲ್ಲೆ, ಮಂಡ್ಯ ಇವರ ಪತ್ರ ಸಂಖ್ಯೆ : ಡಿಆರ್‌ವೈ/ಎ9/ಚುನಾವಣೆ/2021–22, ದಿನಾಂಕ 30.06.2021.

5) ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಸಹಕಾರ ಇಲಾಖೆ, ಬಹುಮಹಡಿಗಳ ಕಟ್ಟಡ, ಬೆಂಗಳೂರು ಇವರ ಪತ್ರ ಸಂಖ್ಯೆ : ಸಿ.ಒ/40/ ಸಿ.ಎಲ್.ಎಂ/2021(ಇ) ದಿನಾಂಕ 17.07.2021.

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ರಾಜ್ಯದಲ್ಲಿ ಕೊರೋನಾ ವೈರಸ್ (ಕೋವಿಡ್–19) ಸಾಂಕ್ರಾಮಿಕವಾಗಿ ಹರಡುತ್ತಿದ್ದ ಹಿನ್ನಲೆಯಲ್ಲಿ ಕೋವಿಡ್–19ರ ಸಾಂಕ್ರಾಮಿಕ ರೋಗದ ಹರಡುವಿಕೆಯನ್ನು ತಡೆಗಟ್ಟುವ ಹಿನ್ನಲೆಯಲ್ಲಿ ಚುನಾವಣೆ ನಡೆಸಲು ಬಾಕಿ ಇದ್ದ ಎಲ್ಲಾ ವಿಧದ ಸಹಕಾರ ಸಂಘಗಳ / ಸೌಹಾರ್ದ ಸಹಕಾರಿಗಳ ಚುನಾವಣೆಗಳನ್ನು ಮುಂದಿನ ಆದೇಶದವರೆಗೆ ಕರ್ನಾಟಕ ಸಹಕಾರ ಸಂಘಗಳ ನಿಯಮಗಳು 1960ರ ನಿಯಮ 14–ಹೆಚ್ ಮತ್ತು ಕರ್ನಾಟಕ ಸೌಹಾರ್ದ ಸಹಕಾರಿ ಅಧಿನಿಯಮ 1997 ಮತ್ತು ನಿಯಮಗಳು 5–ಎಂ ಗಳಂತೆ ಸಹಕಾರ ಚುನಾವಣಾ ಪ್ರಾಧಿಕಾರಕೆ ದತ್ತವಾದ ಅಧಿಕಾರವನ್ನು ಚಲಾಯಿಸಿ ಎಲ್ಲಾ ಚುನಾವಣೆಗಳನ್ನು (ಅಧ್ಯಕ್ಷರು/ಉಪಾಧ್ಯಕ್ಷರು/ನಿರ್ದೇಶಕರ ಖಾಲಿ ಬಿದ್ದ ಸ್ಥಾನಗಳ ಚುನಾವಣೆಗಳನ್ನು ಸಹಾ) ಮುಂದಿನ 6 ತಿಂಗಳ ಅವಧಿಗೆ ಅಥವಾ ಮುಂದಿನ ಆದೇಶದವರೆಗೆ ಉಲ್ಲೇಖ(1) ಮತ್ತು (2)ರ ಈ ಕಛೇರಿಯ ಅಧಿಸೂಚನೆಗಳಂತೆ ಮುಂದೂಡಲಾಗಿರುತ್ತದೆ.

ಉಲ್ಲೇಖ(3) ಮತ್ತು (4)ರ ಜಿಲ್ಲೆಗಳಿಂದ ಸಹಕಾರ ಸಂಘಗಳ / ಸಹಕಾರಿಗಳ ಆಡಳಿತ ಮಂಡಲಿ ನಿರ್ದೇಶಕರ ಚುನಾವಣೆ ಜರುಗಿದ್ದು, ಅಧ್ಯಕ್ಷರು ಮತ್ತು ಉಪಾಧ್ಯಕ್ಷರ ಚುನಾವಣೆಗಳು ಜರುಗದೇ ಇರುವುದರಿಂದ ಸಂಘವನ್ನು ಕಾನೂನಾತ್ಮಕವಾಗಿ ಹಾಗೂ ಆರ್ಥಿಕವಾಗಿ ನಡೆಸಿಕೊಂಡು ಹೋಗಲು ಆಡಳಿತಾತ್ಮಕ ದೃಷ್ಟಿಯಿಂದ ತೊಂದರೆಯಾಗಿರುತ್ತದೆ. ಇದರಿಂದ ಸಂಘದ ದಿನ ನಿತ್ಯದ ಕಾರ್ಯಚಟುವಟಿಕೆಗಳು ಜರುಗದೆ ಅಡಚಣೆ ಉಂಟಾಗಿರುವ ಹಿನ್ನಲೆಯಲ್ಲಿ ಸಹಕಾರ ಸಂಘಗಳಲ್ಲಿ / ಸೌಹಾರ್ದ ಸಹಕಾರಿಗಳಲ್ಲಿ ಆಕಸ್ಮಿಕವಾಗಿ. ತೆರವಾಗಿರುವ ಪದಾಧಿಕಾರಿಗಳ ಚುನಾವಣೆಗಳನ್ನು ಜರುಗಿಸಲು ಅನುಮತಿ ನೀಡುವಂತೆ ಪ್ರಾಧಿಕಾರವನ್ನು ಕೋರಿರುತ್ತಾರೆ. ಹೀಗೆ ರಾಜ್ಯದ ವಿವಿಧ ಜಿಲ್ಲೆಗಳಿಂದಲೂ ಸಹಾ ಕೋರಿಕೆಗಳು ಪ್ರಾಧಿಕಾರದಲ್ಲಿ ಸ್ವೀಕೃತವಾಗಿದ್ದು, ಸರ್ಕಾರವು ದಿನಾಂಕ : 15.06.2021 ರಂದು ಅನ್‌ಲಾಕ್ ಮಾಡಿದ ಹಿನ್ನಲೆಯಲ್ಲಿ ಸದರಿ ಅಧ್ಯಕ್ಷರು / ಉಪಾಧ್ಯಕ್ಷರು (ಪದಾಧಿಕಾರಿಗಳ) ಚುನಾವಣೆಯನ್ನು ನಡೆಸುವ ಸಂಬಂಧ ಪ್ರಾಧಿಕಾರದ ಹಂತದಲ್ಲಿ ಪರಿಶೀಲಿಸಲಾಗುತ್ತಿತ್ತು.

ಈ ಮಧ್ಯೆ, ಉಲ್ಲೇಖ(4)ರ ಸರ್ಕಾರದ ಪ್ರಧಾನ ಕಾರ್ಯದರ್ಶಿಗಳ ಪತ್ರ ದಿನಾಂಕ: 17.07.2021ರಲ್ಲಿ ಸಚಿವ ಸಂಪುಟ ಸಭೆಯ ಸಂಖ್ಯೆ : 10 ಪ್ರಕರಣ ಸಂಖ್ಯೆ ; ಸಿ/264/2021 ದಿನಾಂಕ : 15.07.2021ರಲ್ಲಿನ ನಿರ್ಣಯದಂತೆ ಸಹಕಾರ ಸಂಘಗಳ ನಿರ್ದೇಶಕ ಸ್ಥಾನಗಳಿಗೆ ಚುನಾವಣೆ ನಡೆದು ಅಧ್ಯಕ್ಷರ 1 ಉಪಾಧ್ಯಕ್ಷರ / ಪದಾಧಿಕಾರಿಗಳ ಚುನಾವಣೆಗಳು ಬಾಕಿ ಇದ್ದಲ್ಲಿ ಅಂತಹ ಪ್ರಕರಣಗಳಿಗೆ ಸಂಬಂಧಿಸಿದಂತೆ ಅಧ್ಯಕ್ಷರ / ಉಪಾಧ್ಯಕ್ಷರ / ಪದಾಧಿಕಾರಿಗಳ ಚುನಾವಣೆಯನ್ನು ನಡೆಸಲು ಸೂಕ್ತ ಸುತ್ತೋಲೆಯನ್ನು ಹೊರಡಿಸುವಂತೆ ಪ್ರಾಧಿಕಾರಕ್ಕೆ ನಿರ್ದೇಶಿಸಲಾಗಿರುತ್ತದೆ.

ಆದ್ದರಿಂದ, ಈಗಾಗಲೇ ದಿನಾಂಕ 26.04.2021 ಹಾಗೂ ಅದಕ್ಕಿಂತ ಮೊದಲು ಆಡಳಿತ ಮಂಡಳಿಯ ನಿರ್ದೇಶಕರ ಸ್ಥಾನಗಳಿಗೆ ಚುನಾವಣೆ ನಡೆದು ಅಧ್ಯಕ್ಷರ/ಉಪಾಧ್ಯಕ್ಷರ/ಪದಾಧಿಕಾರಿಗಳ ಚುನಾವಣೆಗಳು ಬಾಕಿ ಇದ್ದಲ್ಲಿ ಮತ್ತು ಆಕಸ್ಮಿಕವಾಗಿ ತೆರವಾದ ಅಧ್ಯಕ್ಷರ ಉಪಾಧ್ಯಕ್ಷರ (ಪದಾಧಿಕಾರಿಗಳ) ಚುನಾವಣೆ ನಡೆಸಲು ಕ್ರಮ ತೆಗೆದುಕೊಳ್ಳಲು ತಿಳಿಸಿದೆ.

ಕೋವಿಡ್–19ರ ನಿಯಂತ್ರಣಕ್ಕೆ ಸಂಬಂಧಿಸಿದಂತೆ ಈ ಕಛೇರಿಯಿಂದ ಹೊರಡಿಸಿರುವ ಪತ್ರ ಸಂಖ್ಯೆ: ಸಚುಪ್ರಾ/ಬೆಂಗಳೂರು/ಕೋವಿಡ್–19/ಕೊರೋನಾ/2020 ದಿನಾಂಕ : 04.09.2020 ಮಾರ್ಗಸೂಚಿಗಳನ್ನು ತಪ್ಪದೆ ಪಾಲಿಸತಕ್ಕದ್ದು. ಉಳಿದಂತೆ, ಸಹಕಾರ ಸಂಘಗಳ / ಸೌಹಾರ್ದ ಸಹಕಾರಿಗಳ ಎಲ್ಲಾ ಸಾಮಾನ್ಯ ಚುನಾವಣೆಗಳನ್ನು 2021ರ ಡಿಸೆಂಬರ್ ಅಂತ್ಯದವರೆಗೆ ಅಥವಾ ಮುಂದಿನ ಆದೇಶದವರೆಗೆ ಮುಂದೂಡಲಾಗಿರುತ್ತದೆ.

ಸಹಿ/–

**ಡಾ। ಎನ್.ಎಸ್. ಚನ್ನಪ್ಪಗೌಡ**

ಆಯುಕ್ತರು, ಸಹಕಾರ ಚುನಾವಣಾ ಪ್ರಾಧಿಕಾರ



# ಭಾರತ ಸರ್ಕಾರದಲ್ಲಿ – ಸಹಕಾರ ಸಚಿವಾಲಯ ಸಾಧಕ ಬಾಧಕಗಳು

**ಶಶಿಧರ ಎಲೆ,** ಸಹಕಾರ ಸಂಘಗಳ ಅಪರ ನಿಬಂಧಕರು (ನಿ)

ಭಾರತ ಸರ್ಕಾರದಲ್ಲಿ ನೂತನವಾಗಿ ಸಹಕಾರ ಸಚಿವಾಲಯ ಸೃಷ್ಟಿಯಾಗಿದೆ. ಈ ಸಂದರ್ಭ ಭಾರತದಲ್ಲಿ ಸಹಕಾರ ಚಳುವಳಿ ಅದಕ್ಕೆ ಪೂರಕವಾಗಿ ಸಹಕಾರ ಕಾಯ್ದೆ ಬೆಳೆದು ಬಂದ ದಾರಿಯನ್ನು ಸಿಂಹಾವಲೋಕನ ಮಾಡುವುದು ಮತ್ತು ಸಚಿವಾಲಯ ಸೃಷ್ಠಿಯ ಸಾಧಕ ಬಾಧಕಗಳನ್ನು ವಿಶ್ಲೇಷಿಸುವುದು ಈ ದಿನದ ಅವಶ್ಯಕತೆ.

ಭಾರತದಲ್ಲಿ ಸಹಕಾರ ಚಳುವಳಿಯ ಉಗಮಕ್ಕೆ ಕಾರಣ 'ಭಾರತದ ಸಹಕಾರ ಪತ್ತು ಕಾಯ್ದೆ 1904'. ಇದನ್ನು ಜಾರಿ ಮಾಡಿದ್ದು ಅಂದಿನ ಬ್ರಿಟಿಷ್ ಇಂಡಿಯಾ ಸರ್ಕಾರ. ತದನಂತರ ಮಾಂಟೆಗೋ ಚೆಲ್ಮಸ್‌ಫರ್ಡ್ ಸುಧಾರಣೆಗಳ ಶಿಫಾರಸ್ಸಿನಂತೆ 'ಸಹಕಾರ' ವಿಷಯವನ್ನು ಪ್ರಾಂತೀಯ ಸರ್ಕಾರಗಳಿಗೆ ವರ್ಗಾಯಿಸಲಾಯಿತು. ಆಗಿನ ಚಿಂತನೆ ಭಾರತದ ಕೃಷಿಕರ ಬವಣೆಗಳನ್ನು ತಪ್ಪಿಸಲು ಕಂಡುಕೊಂಡ ಮಾರ್ಗ 'ಸಹಕಾರ ಚಳುವಳಿ'. ಅದರಂತೆ ಭಾರತ ಸರ್ಕಾರ ಸಹಕಾರ ಸಂಘಗಳ ಮೂಲಕ ಕೃಷಿಕರಿಗೆ ದುಡಿಯುವ ಬಂಡವಾಳ ಒದಗಿಸುತ್ತಿದ್ದ ಜವಾಬ್ದಾರಿಯನ್ನು ಪ್ರಾಂತೀಯ ಸರ್ಕಾರಗಳಿಗೆ ವರ್ಗಾಯಿಸಿತು. ಆ ಜವಾಬ್ದಾರಿ ಪ್ರಾಂತೀಯ ಸರ್ಕಾರಗಳ ಹೆಗಲೇರಿತು. ಭಾರತದ ಕಾಯ್ದೆ 1935 ರಲ್ಲಿಯೂ ಅದು ಮುಂದುವರೆದು 'ಸಹಕಾರ'ದ ವಿಷಯ ಪ್ರಾಂತೀಯ ಸರ್ಕಾರಗಳದ್ದಾಯ್ತು.

ಇದರ ಮುಂದುವರಿಕೆ ಭಾಗವಾಗಿ 'ಸಹಕಾರ'ದ ವಿಷಯ ಭಾರತದ ಸಂವಿಧಾನದ ಏಳನೇ ಷೆಡ್ಯೂಲ್‌ನಲ್ಲಿ 'ರಾಜ್ಯಪಟ್ಟಿ'ಯಲ್ಲಿ 32ನೇ ವಿಷಯವಾಗಿ ಸೇರಿಕೆಯಾಯ್ತು. ಪ್ರಾಂತ್ಯ ಮೀರಿ ಕಾರ್ಯವ್ಯಾಪ್ತಿಯುಳ್ಳ ಸಹಕಾರ ಸಂಘಗಳ ಸ್ಥಾಪನೆ ಅಗತ್ಯ ಕಂಡು ಬಂದಿದ್ದರಿಂದ ಭಾರತ ಸರ್ಕಾರವು ಬಹು ಘಟಕ ಸಹಕಾರ ಕಾಯ್ದೆ 1942ನ್ನು ಜಾರಿ ಮಾಡಿತು. ತದನಂತರದಲ್ಲಿ ಲೋಕಸಭೆಯು ರಾಜ್ಯವ್ಯಾಪ್ತಿ ಮೀರಿ ಕಾರ್ಯವ್ಯಾಪ್ತಿಯ ಸಹಕಾರ ಸಂಘಗಳ ಸ್ಥಾಪನೆಗಾಗಿ 'ಬಹುರಾಜ್ಯ ಸಹಕಾರ ಸಂಘಗಳ ಕಾಯ್ದೆ 1984'ನ್ನು ಜಾರಿಗೆ ತಂದಿತು. (ಭಾರತದ ಸಂವಿಧಾನ ಏಳನೇ ಷೆಡ್ಯೂಲ್, ಒಕ್ಕೂಟ ಪಟ್ಟಿಯ 44ನೇ ವಿಷಯ ಅನುಸರಿಸಿ). ಸಹಕಾರ ಮತ್ತು ಕೃಷಿ ಅವಿಭಾಜ್ಯ ಅಂಗಗಳೆಂದೇ ಪರಿಗಣಿಸಿ ಒಕ್ಕೂಟದ ಸರ್ಕಾರದ ಕೃಷಿ ಕಾರ್ಯದರ್ಶಿಗಳೇ ಬಹುರಾಜ್ಯ ಸಹಕಾರ ಸಂಘಗಳ ಕಾಯ್ದೆ ಅಡಿಯಲ್ಲಿ 'ಸಹಕಾರ ಸಂಘಗಳ ನಿಬಂಧಕರು ಆಗಿ ಕಾರ್ಯನಿರ್ವಹಿಸುತ್ತಿರುತ್ತಾರೆ. ಬಹುರಾಜ್ಯ ಸಹಕಾರ ಕಾಯ್ದೆ 2002 ರಲ್ಲಿ ಸಮಗ್ರ ತಿದ್ದುಪಡಿಯಾಗಿ ಅಸ್ತಿತ್ವದಲ್ಲಿರುತ್ತದೆ. ಈ ಕಾಯ್ದೆಯಡಿಯಲ್ಲಿ ಸುಮಾರು ಆರುನೂರು ಸಹಕಾರ ಸಂಘಗಳು ಕಾರ್ಯನಿರ್ವಹಿಸುತ್ತಿವೆ. ರಾಷ್ಟ್ರದಲ್ಲಿ ಒಟ್ಟಾರೆ ಆರು ಲಕ್ಷಕ್ಕೂ ಮೀರಿ ಸಹಕಾರ ಸಂಘಗಳು ಕಾರ್ಯ ನಿರ್ವಹಿಸುತ್ತಿವೆ.

ಈಗ ಭಾರತ ಸರ್ಕಾರವು "ಸಹಕಾರ ಸಚಿವಾಲಯ"ವನ್ನು 'ಕೃಷಿ'ಯಿಂದ ಬೇರ್ಪಡಿಸಿ ಪ್ರತ್ಯೇಕ ಸಚಿವಾಲಯವಾಗಿ ಅದಕ್ಕೆ ಸಂಪುಟ ದರ್ಜೆ ಮತ್ತು ರಾಜ್ಯ ಸಚಿವ ಸ್ಥಾನ ಮಾನದ 'ಸಹಕಾರ ಸಚಿವರುಗಳನ್ನು' ನೇಮಿಸಿರುತ್ತದೆ. ಈ ಸರ್ಕಾರದ ನಡೆಗೆ ಪರ ಮತ್ತು ವಿರೋಧ ಅಭಿಪ್ರಾಯಗಳು ವ್ಯಕ್ತವಾಗುತ್ತಿವೆ. ಈ ಒಕ್ಕೂಟ ಸರ್ಕಾರದ ನಡೆ ರಾಜ್ಯ ವ್ಯಾಪ್ತಿ ವಿಷಯದಲ್ಲಿ ಅದರ ಹಸ್ತಕ್ಷೇಪ, ಸವಾರಿ ನಡೆಸಲಾಗುತ್ತದೆಯೆ ಎಂಬ ಆತಂಕ ಮನೆ ಮಾಡುತ್ತಿದೆ. ಈ ಹಿನ್ನೆಲೆಯಲ್ಲಿ ಪ್ರತ್ಯೇಕ ಸಚಿವಾಲಯದ ಸೃಷ್ಠಿಯಿಂದ ಸಾಧಕ ಬಾಧಕಗಳನ್ನು ಪರಿಶೀಲಿಸಬೇಕಾಗಿದೆ.

ಭಾರತ ಸರ್ಕಾರವು ಭಾರತದ ಒಟ್ಟಾರೆ ಆರ್ಥಿಕತೆಯ ಮತ್ತು ಕೃಷಿ, ಕೃಷಿ ಪೂರಕ, ಕೃಷಿ ಅವಲಂಭಿತ ಆರ್ಥಿಕತೆಯ ಬೆಳವಣಿಗೆಯ ಹೊಣೆಗಾರಿಕೆಯನ್ನು ಹೊಂದಿರುತ್ತದೆ. ಭಾರತದ ಸ್ವಾತಂತ್ರ್ಯ ನಂತರ ಇದಕ್ಕೆ ಪೂರಕವಾಗಿ ಭಾರತ ಸರ್ಕಾರವು ರಾಷ್ಟ್ರೀಯ ಸಹಕಾರ ಅಭಿವೃದ್ಧಿ ನಿಗಮ (ಎನ್‌ಸಿಡಿಸಿ), ನಬಾರ್ಡ್, ಭಾರತೀಯ ರಿಸರ್ವ್ ಬ್ಯಾಂಕಿನಲ್ಲಿ ಕೃಷಿ ಅಭಿವೃದ್ಧಿ ವಿಭಾಗ ಸ್ಥಾಪಿಸಿದೆ. ಪಂಚವಾರ್ಷಿಕ ಯೋಜನೆಗಳ ಮೂಲಕ ದೀರ್ಘಾವಧಿ, ಮಧ್ಯಮಾವಧಿ, ಅಲ್ಪಾವಧಿ ಕೃಷಿ ಸಾಲಗಳನ್ನು ಕೃಷಿಕರಿಗೆ ಒದಗಿಸಲು ಪುನರ್ಧನ ಸೌಲಭ್ಯ, ಮೂಲಭೂತ ಸೌಕರ್ಯಗಳ ನಿರ್ಮಾಣಕ್ಕಾಗಿ, ಷೇರು ಬಂಡವಾಳ, ಸಬ್ಸಿಡಿ, ಮೆದು ಸಾಲ ಒದಗಿಸಿ ಪ್ರೋತ್ಸಾಹಿಸಿದೆ. ತೊಂಭತ್ತರ ದಶಕದಿಂದ ಭಾರತದ ಆರ್ಥಿಕ ನೀತಿಯ ಬದಲಾವಣೆಯಿಂದ ಈ ರೀತಿಯ ಯೋಜನಾಬದ್ಧ ಸವಲತ್ತುಗಳ ಒದಗಿಸುವಿಕೆಯಲ್ಲಿ ಕಡಿತ ಮತ್ತು ವ್ಯತ್ಯಯಗಳನ್ನು ಕಾಣುತ್ತಲಿದ್ದೇವೆ. ಬೆಂಬಲವನ್ನು ನಿರೀಕ್ಷಿಸಲಾರದಂತಹ ಪರಿಸರ ನಿರ್ಮಾಣವಾಗಿದೆ. ಆದಾಯ ತೆರಿಗೆಯೂ ಸೇರಿದಂತೆ ಸಾರ್ವಜನಿಕರಿಗೆ ಅನ್ವಯವಾಗುವ ಕಾಯ್ದೆಗಳಲ್ಲಿ 'ಸಹಕಾರ'ಕ್ಕೆ ಇದ್ದ ಸವಲತ್ತು (Privilages) ಗಳನ್ನು ತೆಗೆದು ಹಾಕಲಾಗಿದೆ.

ಸ್ವಾತಂತ್ರ್ಯ ನಂತರ ಭಾಷಾವಾರು ರಾಜ್ಯಗಳ ಪುನರ್‌ರಚನೆಯ ನಂತರ ಎಲ್ಲ ರಾಜ್ಯಗಳು ತಮ್ಮದೇ ಆದ ರಾಜ್ಯ ಸಹಕಾರ ಕಾಯ್ದೆಗಳನ್ನು ಜಾರಿ ಮಾಡಿವೆ. ಆದರೂ ಈ ಕಾಯ್ದೆಗಳಲ್ಲಿ ಅತ್ಯಂತ ಹೆಚ್ಚಿನ ಸಾಮ್ಯತೆಯನ್ನು ಗುರುತಿಸಬಹುದಾಗಿದೆ. ಇದಕ್ಕೆ ಕಾರಣ ಅಂದಿನ ಭಾರತ ಸರ್ಕಾರ 'ಮಾದರಿ ಸಹಕಾರ ಕಾಯ್ದೆ' ರಚನೆ ಮಾಡಿ ರಾಜ್ಯಗಳಿಗೆ ಅಳವಡಿಸಿಕೊಳ್ಳಲು ಕಳುಹಿಸಿದ್ದೇ ಕಾರಣ ಎಂದರೆ ತಪ್ಪಾಗಲಾರದು. ತದನಂತರದ ಬೆಳವಣಿಗೆಯಲ್ಲಿ ಆಯಾ ರಾಜ್ಯ ಕಾಯ್ದೆಗಳಲ್ಲಿ ತಿದ್ದುಪಡಿಯಾಗಿ ರಾಜ್ಯ ಸರ್ಕಾರಗಳು ಸಹಕಾರ ಸಂಘಗಳನ್ನು 'ಅತಿ' ನಿಯಂತ್ರಣ ಮಾಡುತ್ತಿವೆ. ಸಹಕಾರದ ಮತ್ತು ತನ್ಮೂಲಕ ಆರ್ಥಿಕ ಬೆಳವಣಿಗೆಗೆ ಧಕ್ಕೆಯಾಗುತ್ತಿದೆ. ಅವುಗಳ ಸ್ವಾತಂತ್ರ್ಯ ಮತ್ತು ಸ್ವಾಯತ್ತತೆಗೆ ಧಕ್ಕೆಯಾಗುತ್ತಿದೆ. ಪ್ರಜಾಸತ್ತಾತ್ಮಕ ಆಡಳಿತಕ್ಕೆ ಅರ್ಥವಿಲ್ಲದಂತಾಗಿದೆ ಎಂದು ಭಾವಿಸಿದಾಗ ಭಾರತ ಸರ್ಕಾರ ಮೊದಲಿಗೆ ಈ ತರಹೆಯ

ಕಾಯ್ದೆಯಾತ್ಮಕ ಅಂಶಗಳನ್ನು ತೆಗೆಯಲು ನಿರ್ದೇಶನ ನೀಡಿತಾದರೂ ಯಾವುದೇ ರಾಜ್ಯ ಸರ್ಕಾರಗಳು ಇದಕ್ಕೆ ಮಾನ್ಯತೆ ನೀಡದೆ ಇದ್ದಾಗ ಪ್ರತ್ಯೇಕ ಪರ್ಯಾಯ ಕಾಯ್ದೆ ಜಾರಿಗೆ ತರುವಂತೆ ನಿರ್ದೇಶನ ನೀಡಿತು. ಅದರಂತೆ ಮೊದಲಿಗೆ ಆಂದ್ರ (ಅವಿಭಾಜಿತ) ರಾಜ್ಯ 'ಆದರ್ಶ' ಸಹಕಾರ ಕಾಯ್ದೆ ಜಾರಿಗೆ ತಂದಿತು. ತದನಂತರ ಕರ್ನಾಟಕದಲ್ಲಿ 'ಸೌಹಾರ್ದ ಸಹಕಾರ ಕಾಯ್ದೆ' ಜಾರಿಗೆ ತರಲಾಯಿತು. ಈಗಲೂ ಕೇವಲ ಎಂಟು ರಾಜ್ಯಗಳಲ್ಲಿ ಮಾತ್ರ ಈ ರೀತಿಯ ಕಾಯ್ದೆ ಜಾರಿಯಲ್ಲಿದೆ. ತದನಂತರ 97ನೇ ಸಂವಿಧಾನ ತಿದ್ದುಪಡಿ 2011 ಜನವರಿಯಿಂದ ಜಾರಿಗೆ ತಂದದ್ದು ಈಗ ಇತಿಹಾಸ. ಭಾರತದ ಸಹಕಾರ ಚಳವಳಿಯಲ್ಲಿ ಒಂದು ಮೈಲಿಗಲ್ಲು ಎಂದೇ ಪರಿಗಣಿಸಲಾಗಿದೆ. ಸಹಕಾರ ಸಂಘದ ಸ್ಥಾಪನೆ ಒಬ್ಬ ಭಾರತೀಯ ಪ್ರಜೆಯ ಮೂಲಭೂತ ಹಕ್ಕಾಗಿ ಪರಿಗಣನೆಗೆ ಆಯ್ತು (ಅನುಚ್ಛೇದ 19), ಸಹಕಾರ ಸಂಘಗಳ ಸ್ವಇಚ್ಛೆಯ ರಚನೆ, ಸ್ವಾಯತ್ತ ಕಾರ್ಯಾಚರಣೆ, ಪ್ರಜಾಸತ್ತಾತ್ಮಕ ಹತೋಟಿ ಮತ್ತು ವೃತ್ತಿಪರ ವ್ಯವಸ್ಥಾಪನೆ ಪ್ರೋತ್ಸಾಹಿಸುವಂತೆ ರಾಜ್ಯ ಸರ್ಕಾರಗಳಿಗೆ ನಿರ್ದೇಶಿಸಲಾಗಿದೆ (ಅನುಚ್ಛೇದ 34ಬಿ). ಇದಕ್ಕೆ ಪೂರಕವಾಗಿ ಅನುಚ್ಛೇದ 243ಝಡ್ಐ ನಿಂದ ಝಡ್‌ಟಿ ವರೆಗೆ, ಆಡಳಿತ ಮಂಡಳಿ ಅವಧಿ, ವೃತ್ತಿಪರ ನಿರ್ದೇಶಕರ ನೇಮಕಾತಿಗೆ ಅವಕಾಶ, ಪ್ರತ್ಯೇಕ ಚುನಾವಣಾ ಪ್ರಾಧಿಕಾರ ರಚನೆ, ಸರ್ಕಾರದ ಸಹಾಯ ಇಲ್ಲದ ಸಹಕಾರ ಸಂಘಗಳ ಆಡಳಿತ ಮಂಡಳಿ ರದ್ಧತಿಗೆ ನಿಷೇಧ ಇಂತಹ ಆಡಳಿತಾತ್ಮಕ ಅಂಶಗಳನ್ನು ವಿಸ್ತೃತವಾಗಿ ಒಳಗೊಂಡಿದೆ. ರಾಜ್ಯ ಸರ್ಕಾರಗಳಿಗೆ ಮತ್ತು ಬಹುರಾಜ್ಯ ಸಹಕಾರ ಕಾಯ್ದೆಗೂ ಇದು ಅನ್ವಯಿಸುತ್ತದೆ ಮತ್ತು ಅವಶ್ಯ ಕಾಯ್ದೆ ತಿದ್ದುಪಡಿಗೆ ಒಂದು ವರ್ಷದ ಅವಧಿಯನ್ನು ನಿಗದಿಪಡಿಸಲಾಗಿತ್ತು. ಸಹಕಾರ ಸಂಘಗಳಿಗೆ ಅನ್ವಯವಾಗುವಂತಿರುವ ಬ್ಯಾಂಕಿಂಗ್ ನಿಯಂತ್ರಣ ಕಾಯ್ದೆ ಇತ್ತೀಚೆಗೆ ತಿದ್ದುಪಡಿಯಾಗಿದೆ. ಇದರಂತೆ ಪ್ರಾಥಮಿಕ (ಪಟ್ಟಣ) ಸಹಕಾರ ಬ್ಯಾಂಕ್‌ಗಳು, ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕ್‌ಗಳು, ರಾಜ್ಯ ಸಹಕಾರ ಬ್ಯಾಂಕ್‌ಗಳ ಆಡಳಿತ ನಿಯಂತ್ರಣವನ್ನು ಬಹುತೇಕ ಭಾರತೀಯ ರಿಸರ್ವ್ ಬ್ಯಾಂಕ್ ವಹಿಸಿಕೊಂಡಂತಾಗಿದೆ.

ಈ ಹಿನ್ನೆಲೆಯಲ್ಲಿ ಕೃಷಿ ಸಚಿವಾಲಯದ ಒಂದು ಭಾಗವಾಗಿದ್ದ 'ಸಹಕಾರ'. ಪ್ರತ್ಯೇಕ ಸಚಿವಾಲಯವಾಗಿರುವುದರಿಂದ, ಆಗಬಹುದಾದ ಬದಲಾವಣೆಗಳು ಮತ್ತು 'ಭಾರತದ ಸಹಕಾರ ಚಳುವಳಿ'ಯ ಮೇಲೆ ಆಗುವ ಪರಿಣಾಮಗಳೇನು ಎಂಬ ವಿಸ್ತೃತ ಚರ್ಚೆ ಅಗತ್ಯವಾಗಿ ಆಗಬೇಕಾಗಿದೆ. ಭಾರತ ಸರ್ಕಾರದ ಸಹಕಾರ ಸಚಿವಾಲಯ ಕೇವಲ ಬಹುರಾಜ್ಯ ಸಹಕಾರ ಸಂಘಗಳ ಕಾಯ್ದೆ ವ್ಯಾಪ್ತಿಯಲ್ಲಿ ಬರುವ ಸಹಕಾರ ಸಂಘಗಳ ನೋಂದಣಿ, ನಿಯಂತ್ರಣ, ಬೆಳವಣಿಗೆ, ಅಭಿವೃದ್ಧಿ ಅಂಶಗಳಿಗೆ ಒತ್ತು ನೀಡುತ್ತದೆಯೇ? ಪ್ರತ್ಯೇಕ ಸಚಿವಾಲಯವಾದುದರಿಂದ ಪ್ರತ್ಯೇಕ ನಿಬಂಧಕರ ನೇಮಕಾತಿ ಅವಶ್ಯಕತೆ ಇದೆ. ಅದರಂತೆ ಈ ಸಹಕಾರ ಸಂಘಗಳು ಹೆಚ್ಚು ದಕ್ಷತೆಯಿಂದ, ಸದಸ್ಯರಿಗೆ ಹೊಣೆಗಾರರಿಗೆ ಅವರ ಆಸೆ, ಆಕಾಂಕ್ಷೆ, ನಿರೀಕ್ಷೆಗಳನ್ನು ಈಡೇರಿಸಲು ಸಹಕಾರಿಯಾಗುತ್ತದೆಯೇ? ಕೇಂದ್ರ ಸ್ಥಾನ 'ನವದೆಹಲಿ' ಯಾಗಿರುವುದರಿಂದ ಸಂಘಗಳಲ್ಲಿನ ವಿವಾದಗಳ ಇತ್ಯರ್ಥ, ಸಿಬ್ಬಂದಿಯ, ಸದಸ್ಯರ ಕುಂದುಕೊರತೆಗಳ ನಿವಾರಣೆಗೆ ವಿಕೇಂದ್ರೀಕೃತ ವಿಸ್ತೃತ ವ್ಯವಸ್ಥೆ ನಿರ್ಮಾಣಕ್ಕೆ ಕಾರಣವಾಗುತ್ತದೆಯೇ? ಹತ್ತು ಹಲವಾರು ವಿನೂತನ, ಆಧುನಿಕ ಅವಶ್ಯಕತೆಗಳ ಪೂರೈಕೆ, ಯುವಜನರ, ಮಹಿಳೆಯರ ಸಬಲತೆಗೆ ಕಾರನವಾಗಬಲ್ಲ ಸಹಕಾರ ಸಂಘಗಳ ಸ್ಥಾಪನೆಗೆ ಬೆಂಬಲ, ಪ್ರೋತ್ಸಾಹ ದೊರೆಯುತ್ತದೆಯೇ? ಈ ದಿಸೆಯಲ್ಲಿ ರಾಷ್ಟ್ರಮಟ್ಟದ ಬೃಹತ್ ಸಹಕಾರ ಸಂಸ್ಥೆಗಳ ಸಭೆಯಲ್ಲಿ ಉತ್ತೇಜನಯುತ ಮಾತುಗಳನ್ನಾಡಿರುವುದು ಸಂತಸದ ಸಂಗತಿಯಾಗಿದೆ.

ಎನ್.ಸಿ.ಡಿ.ಸಿ. ನಬಾರ್ಡ್, ಶಿಕ್ಷಣ ತರಬೇತಿ ಜವಾಬ್ದಾರಿ ಹೊಂದಿರುವ ಎನ್.ಸಿ.ಸಿ.ಟಿ. ಸಂಸ್ಥೆಗಳಿಗೆ ಪ್ರತ್ಯೇಕ ಸಚಿವಾಲಯದಿಂದ ಹೆಚ್ಚು ಆರ್ಥಿಕ ನೆರವು ಪಡೆದು ಹೆಚ್ಚಿನ ಸಾಮರ್ಥ್ಯದೊಡನೆ ರಾಷ್ಟ್ರದಾದ್ಯಂತ ಸಹಕಾರ ಸಂಘಗಳ ಬಲವರ್ಧನೆಗೆ ಕಾರಣವಾಗಬಲ್ಲದು ಎಂದು ನಿರೀಕ್ಷಿಸಬಹುದೇ? ಸಚಿವಾಲಯವು ಈ ಅಂಶಗಳಿಗೆ ಸಂಬಂಧಿಸಿದಂತೆ ವೇಗವರ್ಧಕವಾಗಿ ಕಾರ್ಯನಿರ್ವಹಿಸಬಲ್ಲುದೇ? ರದ್ದಾಗಿರುವ ಸವಲತ್ತುಗಳನ್ನು ಪುನಃ ಒದಗಿಸಬಲ್ಲುದೇ?

ಒಕ್ಕೂಟ (ಕೇಂದ್ರ) ಸಹಕಾರ ಸಚಿವಾಲಯವು 97ನೇ ಸಂವಿಧಾನ ತಿದ್ದುಪಡಿ ಅಂಶಗಳ ಬಗ್ಗೆ ತೆಗೆದುಕೊಂಡಿರುವ ಕ್ರಮಗಳ ಬಗ್ಗೆ ಉಸ್ತುವಾರಿ, ಅನುಪಾಲನೆ ಮೇಲೆ ಕ್ರಮಗಳು, ಉತ್ತಮವಾಗಿ ಕಾರ್ಯನಿರ್ವಹಿಸುತ್ತಿರುವ ಸಹಕಾರ ಸಂಘಗಳ, ಹಲವು ರಾಜ್ಯಗಳಲ್ಲಿ ಅತ್ಯುತ್ತಮವಾಗಿ ಮೂಡಿಬಂದಿರುವ ಸಹಕಾರ ಚಳುವಳಿ (ಉದಾ: ಕೇರಳ) ಯನ್ನು ಇತರೆ ಸಹಕಾರದಲ್ಲಿ ಹಿಂದಿರುವ ರಾಜ್ಯಗಳಿಗೆ, ಪರಿಚಯಿಸುವ, ಸ್ಥಾಪಿಸುವ ಉತ್ತೇಜಿಸುವ ಕ್ರಮಗಳನ್ನು ನಿರೀಕ್ಷಿಸಬಹುದೇ?

ಸಹಕಾರ ವಲಯವು ಆರ್ಥಿಕ, ಸಾಮಾಜಿಕ ನ್ಯಾಯದೊಡನೆ ರಾಜಕೀಯ ನಾಯಕತ್ವದ ಬೆಳವಣಿಗೆಗೆ ಕಾರಣವಾಗಿದೆ ಎಂಬುದು ಸತ್ಯಕ್ಕೆ ದೂರವಲ್ಲ. ಬಲಯುತ ಒಕ್ಕೂಟ (ಕೇಂದ್ರ) ಸರ್ಕಾರವು ರಾಜ್ಯದ ಸಹಕಾರ ವಿಷಯದಲ್ಲಿ ಹಸ್ತಕ್ಷೇಪ ಮಾಡದೆ, ಹಿತಾಸಕ್ತಿ ಸಂಘರ್ಷಕ್ಕೀಳಿಯದೇ ಸಹಕಾರ ಸಂಘಗಳ ಬೆಳವಣಿಗೆಗೆ, ಚಳುವಳಿಯ ಬಲವರ್ಧನೆಗೆ ಪೂರಕವಾದ ಆರ್ಥಿಕ ಮತ್ತು ಸಹಕಾರ ಚಳುವಳಿಗೆ ಇಂಬುಕೊಡುವಂತಹ ಸಹಕಾರ ನೀತಿಯನ್ನು ಜಾರಿಗೆ ತರುತ್ತದೆಯೇ? ರಾಜ್ಯ ಸರ್ಕಾರಗಳ ಸಹಕಾರ ನೀತಿ, ಯೋಜನೆಗಳಿಗೆ ನಿಲ್ಲುತ್ತದೆಯೇ? ಹಲವು ರಾಜ್ಯ ಸರ್ಕಾರಗಳ ಈ ಅನುಮಾನ, ಆತಂಕಗಳನ್ನು ನಿವಾರಿಸುವ ಅವಶ್ಯಕತೆ ಕಂಡುಬರುತ್ತಿದೆ.

ಒಕ್ಕೂಟ (ಕೇಂದ್ರ) ಸರ್ಕಾರ, ರಾಜ್ಯ ಸರ್ಕಾರಗಳ ಅಂತರ ಸುಸಂಬಂಧವನ್ನು ಉಳಿಸಿಕೊಂಡು ಸಹಕಾರ ಚಳುವಳಿಯನ್ನು ಬೆಳೆಸುವುದು, ಭಾರತದ ಆರ್ಥಿಕತೆಯ ಸಮತೋಲನದ ಬೆಳವಣಿಗೆ, ಬಡತನ ನಿರ್ಮೂಲನೆ, ಆಹಾರ ಭದ್ರತೆ, ಉಳ್ಳವರು ಇಲ್ಲದವರ ನಡುವಿನ ಅಂತರ, ಕಂದಕ ನಿರ್ಮೂಲನೆ 'ಸರ್ವರಿಗೂ ಸಮಪಾಲು, ಸರ್ವರಿಗೂ ಸಮಬಾಳು' ಎಂಬ ಸಂವಿಧಾನದ ಆಶಯದ ಪೂರೈಕೆಗೆ ಸಹಕಾರಿಯಾಗುತ್ತದೆ. ಈ ದಿಸೆಯಲ್ಲಿ ನೂತನ ಸಹಕಾರ ಸಚಿವಾಲಯ ಕಾರ್ಯ ನಿರ್ವಹಿಸಲಿ ಎಂಬುದು ಸಹಕಾರಿಗಳ ಆಶಯ. 'ಸಹಕಾರಂ ಗೆಲ್ಗೆ' 'ಸಹಕಾರಂ ಬಾಳ್ಗೆ'



# 75ನೇ ಸ್ವಾತಂತ್ರ್ಯ ಸಂಭ್ರಮ

**ಭಾರತವು 1947, 1948, 1965, 1971 ಹಾಗೂ 1999 ರಲ್ಲಿ ಯುದ್ಧ ಮಾಡುವ ಮೂಲಕ ಅದರ ಸೊಕ್ಕನ್ನು ಅಡಗಿಸಿತು. 1971 ಯುದ್ಧದಲ್ಲಿ ಅಂದಿನ ಪ್ರಧಾನಮಂತ್ರಿ ಇಂದಿರಾಗಾಂಧಿ ಯವರು ಪಾಕಿಸ್ತಾನವನ್ನು ಎರಡು ಭಾಗ ಮಾಡಿ ಬಾಂಗ್ಲಾದೇಶದ ಸೃಷ್ಟಿಗೆ ಕಾರಣಕರ್ತರಾದರು. ಈ ಯುದ್ದದಲ್ಲಿ ಪಾಕಿಸ್ತಾನದ 90 ಸಾವಿರಕ್ಕೂ ಅಧಿಕ ಮಂದಿ ಸೈನಿಕರು ಭಾರತದ ಸೈನ್ಯದ ಮುಂದೆ ಮಂಡಿಗಾಲು ಊರಿ ಶರಣಾದರು. ಜಗತ್ತಿನ ಯುದ್ಧ ಇತಿಹಾಸದಲ್ಲಿಯೇ ಅತಿ ದೊಡ್ಡ ಸಂಖ್ಯೆಯ ಸೈನಿಕರು ಏಕಕಾಲಕ್ಕೆ ಶರಣಾದ ಘಟನೆ ಎಂದು ಇತಿಹಾಸ ಪುಟದಲ್ಲಿ ದಾಖಲಾಗಿದೆ.**

ಭಾರತ ತನ್ನ 75ನೇ ಸ್ವಾತಂತ್ರ್ಯ ದಿನಾಚರಣೆಯನ್ನು ಅತ್ಯಂತ ಸಡಗರ ಸಂಭ್ರಮದಿಂದ ಆಚರಿಸಿಕೊಳ್ಳುತ್ತಿದೆ. ಜಗತ್ತಿನಾದ್ಯಂತ ಇರುವ ಭಾರತೀಯರು ಸ್ವಾತಂತ್ರ್ಯ ದಿನಾಚರಣೆಯ ಖುಷಿಯಲ್ಲಿ ಭಾಗವಹಿಸುವ ಮೂಲಕ ತಾಯ್ನಾಡಿಗೆ ಗೌರವ ಸಲ್ಲಿಸುವ ಕಾರ್ಯಚಾಚು ತಪ್ಪದೆ ಮಾಡುತ್ತಾರೆ. ದೇಶದ ಮೂಲೆ ಮೂಲೆಯಲ್ಲೂ ಸ್ವಾತಂತ್ರ್ಯ ದಿನಾಚರಣೆ ಸಂಭ್ರಮ ಕಾಣುತ್ತಿದೆ. ಧ್ವಜಾರೋಹಣ, ರಾಷ್ಟ್ರಗೀತೆ, ಭಾಷಣ, ಸಿಹಿ ಸಂಚುವ ಮೂಲಕ ಸ್ವಾತಂತ್ರ್ಯೋತ್ಸವನ್ನು ಆಚರಿಸಲಾಗುತ್ತದೆ. ಕೊರೋನಾ ಸಂಕ್ರಾಮಿಕ ಹಾವಳಿಯ ಹಿನ್ನಲೆಯಲ್ಲಿ ಕಳೆದ ವರ್ಷ ಮತ್ತು ಈ ಸ್ವಾತಂತ್ರ್ಯೋತ್ಸವವನ್ನು ಜನ ಸಂದಣಿ ಸೇರಲು ಅವಕಾಶ ನೀಡದೆ ಅತ್ಯಂತ ಸರಳ ಹಾಗೂ ಅರ್ಥಪೂರ್ಣವಾಗಿ ಆಚರಿಸಲಾಗುತ್ತಿದೆ. ಬೆಂಗಳೂರಿನ ಲಾಲ್ ಬಾಗ್‌ನಲ್ಲಿ ಪ್ರತಿವರ್ಷ ನಡೆಯುವ ಸ್ವಾತಂತ್ರ್ಯೋತ್ಸವ ಫಲಪುಷ್ಪ ಪ್ರದರ್ಶನ ರದ್ದು ಪಡಿಸಲಾಗಿದೆ.

ಮಾಣಿಕ್ ಶಾ ಪರೇಡ್ ಮೈದಾನದಲ್ಲಿ ನಡೆಯುವ ಸರ್ಕಾರದ ಅಧಿಕೃತ ಕಾರ್ಯಾಕ್ರಮಕ್ಕೆ ಸೀಮಿತ ಗಣ್ಯರಿಗೆ ಮಾತ್ರ ಆಹ್ವಾನ ನೀಡಲಾಗುತ್ತದೆ. ಆದರೆ ಸ್ವಾತಂತ್ರ್ಯೋತ್ಸವವನ್ನು ದೇಶಾದ್ಯಂತ ಹಬ್ಬದಂತೆ ಆಚರಿಸುವ ಮೂಲಕ ನಾಡಿಗೆ ಮತ್ತು ನಾಡ ಧ್ವಜಕ್ಕೆ ಗೌರವ ಸಲ್ಲಿಸಲಾಗುತ್ತದೆ.

### ಸ್ವಾತಂತ್ರ್ಯ ಭಾರತ ಮತ್ತು ಸರ್ಕಾರಗಳು

1947 ಅಗಸ್ಟ್ 15 ಮಧ್ಯರಾತ್ರಿ ಬಿಟೀಷರಿಂದ ಭಾರತ ಸ್ವಾತಂತ್ರ್ಯ ಪಡೆದಾಗ ನೂರಾರು ಸಮಸ್ಯೆ ಹಾಗೂ ಸವಾಲುಗಳು ಅದರ ಮುಂದಿದ್ದವು. ಅಂದು ಭಾರತದ ಜನಸಂಖ್ಯೆ 35 ಕೋಟಿ ಅವರಲ್ಲಿ ಬಡತನ ರೇಖೆಗಿಂತ ಕೆಳಗಿರುವವರು ಹಾಗೂ ಅನಕ್ಷರಸ್ಥರೆ ಅಧಿಕ ಸಂಖ್ಯೆಯಲ್ಲಿ ಇದ್ದರು. ಇವರಲ್ಲಿ ಹೆಚ್ಚಿನವರಿಗೆ ತಲೆಮೇಲೊಂದು ಸೂರು, ಹೊಟ್ಟೆ ತುಂಬಾ ಊಟ, ಕೈ ತುಂಬಾ ದುಡಿಮೆಯು ಇರಲಿಲ್ಲ. ಪ್ರತಿದಿನದ ತುತ್ತು ಊಟಕ್ಕೂ ಪರದಾಡುವ ದೈನೆಸಿ ಸ್ಥಿತಿ. ಎಲ್ಲಿ ನೋಡಿದರೂ ಹಸಿವಿನ ಹಾಹಾಕಾರ. ಆರೋಗ್ಯ, ಸಾರಿಗೆ, ಶಿಕ್ಷಣ, ವಸತಿ ವ್ಯವಸ್ಥೆಯಂತೂ ದೇವರಿಗೆ ಪ್ರೀತಿ.

ಅಂದು ಸ್ವತಂತ್ರ ಭಾರತ ಸರ್ಕಾರ ಮಂಡಿಸಿದ ಮೊದಲ ಬಜೆಟ್ ಗಾತ್ರ 171.15 ಕೋಟಿ ರೂಪಾಯಿ, ಇದರಿಂದಲೆ ಗೊತ್ತಾಗುತ್ತದೆ ದೇಶ ಆರ್ಥಿಕ ಪರಿಸ್ಥಿತಿ ಎಷ್ಟು ದೈನೆಸಿ ಸ್ಥಿತಿಯಲ್ಲಿ ಇತ್ತು ಎಂಬುದು. ಸ್ವತಂತ್ರ ಭಾರತದ ಸರ್ಕಾರದ ಮುಂದಿರುವ ದೊಡ್ಡ ಸವಾಲು ಎಂದರೆ ಹಸಿದ ಹೊಟ್ಟೆಗೆ ಊಟ, ದುಡಿಯವ ಕೈಗೆ ಕೆಲಸ, ತಲೆಮೇಲೊಂದು ಸೂರು, ಮಕ್ಕಳಿಗೆ ಶಿಕ್ಷಣ, ಉತ್ತಮ ಆರೋಗ್ಯ ಸೌಲಭ್ಯ , ಕೃಷಿ ಚಟುವಟಿಕೆಗೆ ನೀರಾವರಿ ಸೌಲಭ್ಯ ದೇಶದ ಭದ್ರತೆ ಬಲಿಷ್ಠ ಮಿಲಟರಿ ವ್ಯವಸ್ಥೆ.

ಪ್ರಧಾನಮಂತ್ರಿ ಪಂಡಿತ್ ಜವಾಹರಲಾಲ್ ನೇತೃತ್ವದ ಸ್ವತಂತ್ರ ಭಾರತ ಮೊದಲ ಸರ್ಕಾರದಲ್ಲಿ ಘಟಾನುಘಟಿ ನಾಯಕರಾದ ಸಂವಿಧಾನ ಶಿಲ್ಪಿ ಬಿ.ಆರ್.ಅಂಬೇಡ್ಕರ್, ಉಕ್ಕಿನ ಮನುಷ್ಯ ಸರ್ದಾರ್ ವಲ್ಲಭಭಾಯಿ ಪಟೇಲ್, ರಫಿ ಅಹಮ್ಮದ್ ಕಿದ್ವಾಯಿ, ಸರದಾರ ಬಲದೇವ ಸಿಂಗ್, ಮೌಲಾನ ಅಬ್ದುಲ್ ಕಲಾಂ ಆಜಾದ್, ರಾಜೇಂದ್ರ ಪ್ರಸಾದ್, ಜಾನ್ ಮಥಾಯಿ, ಜಗಜೀವನ್ ರಾಮ್, ಅಮೃತ್ ಕೌರ್, ಶ್ಯಾಂ ಪ್ರಸಾದ್ ಮುಖರ್ಜಿ, ಖುರ್ಷಿದ್ ಲಾಲ್, ಆರ್.ಆರ್.ದಿವಾಕರ್, ಮೋಹನ್ ಲಾಲ್ ಸೆಕ್ಸನಾ, ಎನ್.ಗೋಪಾಲಸ್ವಾಮಿ ಅಯ್ಯಂಗಾರ್, ಎನ್.ವಿ.ಗಾಡ್ಗಿಲ್, ಕೆ.ಸಿ.ನಿಯೋಗಿ, ಜೈರಾಂದಾಸ ದೌಲತರಾಮ್, ಕೆ.ಸಂತಾನಮ್, ಸತ್ಯನಾರಾಯಣ ಸಿನ್ಹಾ ಹಾಗೂ ಬಿ.ವಿ.ಕೆಸ್ಕರ್ ಪ್ರಮುಖ ಸಚಿವರಾಗಿ ಅಧಿಕಾರವಹಿಸಿಕೊಂಡು ಸವಾಲಿನ ಸಮಯದಲ್ಲಿ ದೇಶವನ್ನು ಸರಿದಾರಿಯಲ್ಲಿ ಮುನ್ನಡೆಸಿದರು.

### ನೆರೆ ಹೊರೆ ದೇಶಗಳೊಂದಿಗೆ ಯುದ್ಧ

ಸ್ವತಂತ್ರ ಭಾರತದ ಪ್ರಮುಖ ಸವಾಲುಗಳಲ್ಲಿ ನೆರೆಹೊರೆಯ ದೇಶಗಳು ಕಾಲು ಕರೆದುಕೊಂಡು ಜಗಳಕ್ಕೆ ಬರುವುದು ದೊಡ್ಡ ತಲೆನೋವಿನ ಸಂಗತಿಯಾಗಿತ್ತು. ದೇಶವನ್ನು ಅಭಿವೃದ್ಧಿ ಪಥದಲ್ಲಿ ತಗೆದುಕೊಂಡು ಹೋಗಲು ಸಂಪನ್ಮೂಲಗಳನ್ನು ಕ್ರೋಡೀಕರಿಸುವುದರ ಜೊತೆಗೆ ನೆರೆಯ ಪಾಕಿಸ್ತಾನ ಮತ್ತು ಚೀನಾದ ಅನಗತ್ಯ ಉಪಟಲಕ್ಕೆ ಕಡಿವಾಣ ಹಾಕುವುದು ದೊಡ್ಡ ತಲೆನೋವಿನ ವಿಷಯವಾಗಿತ್ತು. ಕಾಶ್ಮೀರದ ವಿಷಯವಾಗಿ ಕಾಲು ಕರೆದುಕೊಂಡು ಜಗಳಕ್ಕೆ ಬಂದ ಪಾಕಿಸ್ತಾನದೊಂದಿಗೆ ಭಾರತವು 1947, 1948, 1965, 1971 ಹಾಗೂ 1999 ರಲ್ಲಿ ಯುದ್ಧ ಮಾಡುವ ಮೂಲಕ ಅದರ ಸೊಕ್ಕನ್ನು ಅಡಗಿಸಿತು. 1971 ಯುದ್ದದಲ್ಲಿ ಅಂದಿನ ಪ್ರಧಾನಮಂತ್ರಿ ಇಂದಿರಾಗಾಂಧಿ ಯವರು ಪಾಕಿಸ್ತಾನವನ್ನು ಎರಡು ಭಾಗ ಮಾಡಿ ಬಾಂಗ್ಲಾದೇಶದ ಸೃಷ್ಟಿಗೆ ಕಾರಣಕರ್ತರಾದರು. ಈ ಯುದ್ದದಲ್ಲಿ ಪಾಕಿಸ್ತಾನದ 90 ಸಾವಿರಕ್ಕೂ ಅಧಿಕ ಮಂದಿ ಸೈನಿಕರು ಭಾರತದ ಸೈನ್ಯದ ಮುಂದೆ ಮಂಡಿಗಾಲು ಊರಿ ಶರಣಾದರು. ಜಗತ್ತಿನ ಯುದ್ಧ ಇತಿಹಾಸದಲ್ಲಿಯೇ ಅತಿ ದೊಡ್ಡ ಸಂಖ್ಯೆಯ ಸೈನಿಕರು ಏಕಕಾಲಕ್ಕೆ ಶರಣಾದ ಘಟನೆ ಎಂದು ಇತಿಹಾಸ ಪುಟದಲ್ಲಿ ದಾಖಲಾಗಿದೆ. 1999 ರಲ್ಲಿ ಪ್ರಧಾನಮಂತ್ರಿ ಅಟಲ್ ಬಿಹಾರಿ ವಾಜಪೇಯಿ ಸರ್ಕಾರದ ಅವಧಿಯಲ್ಲಿ ಪಾಕಿಸ್ತಾನ ಕಾರ್ಗಿಲ್ ಮೇಲೆ


ದಾಳಿ ಮಾಡಿದಾಗ ಭಾರತದ ಸೈನಿಕರು ತಕ್ಕ ಉತ್ತರ ನೀಡಿ ಪಾಕಿಸ್ತಾನದ ಸೈನಿಕರ ಸೊಕ್ಕು ಅಡಗಿಸಿದರು.

1962 ರಲ್ಲಿ ಭಾರತ ಮತ್ತು ಚೀನಾ ನಡುವೆ ನಡೆದ ಯುದ್ಧದಲ್ಲಿ ಭಾರತ ದೊಡ್ಡ ಪ್ರಮಾಣದ ಹಾನಿ ಅನುಭವಿಸಬೇಕಾಯಿತು. ಇಂದಿಗೂ ಸಹ ಪಾಕಿಸ್ತಾನ ಮತ್ತು ಚೀನಾ ದೇಶಗಳು ಭಾರತದ ಶಾಂತಿ ಕದಡಲು ನಿರಂತರವಾಗಿ ಪ್ರಯತ್ನ ನಡೆಸುತ್ತಿವೆ, ಆದರೆ ಇಂದು ಭಾರತದ ಬಲಿಷ್ಠ ರಕ್ಷಣಾ ವ್ಯವಸ್ಥೆ ಎಲ್ಲಾ ರೀತಿಯ ಸವಾಲುಗಳನ್ನು ಎದುರಿಸಲು ಸಮರ್ಥವಾಗಿದೆ ಎಂಬುದು ಹೆಗ್ಗಳಿಕೆಯ ವಿಷಯ.

## ಸ್ವತಂತ್ರ ಭಾರತದ ಇಂದಿನ ಸವಾಲು

ಸ್ವಾತಂತ್ರ್ಯ ಬಂದ ಆರಂಭದಲ್ಲಿ 35 ಕೋಟಿ ಜನ ಸಂಖ್ಯೆ ಹೊಂದಿರುವ ದೇಶದ ಇಂದಿನ ಜನಸಂಖ್ಯೆ ಗಾತ್ರ 130 ಕೋಟಿಗೆ ಹೆಚ್ಚಿದೆ. ಬಜೆಟ್ ಗಾತ್ರ 171.15 ಕೋಟಿ ರೂಪಾಯಿ ಯಿಂದ 34.83 ಟ್ರಿಲಿಯನ್ ರೂಪಾಯಿಗೆ ಹೆಚ್ಚಿದೆ. ಜಗತ್ತಿನಲ್ಲಿ ಅತಿ ಹೆಚ್ಚು ಮಾನವ ಸಂಪನ್ಮೂಲ ಹೊಂದಿರುವ ದೇಶ ಎಂಬ ಹೆಗ್ಗಳಿಕೆ ಪಾತ್ರವಾಗಿದೆ. ಮಾಹಿತಿ ತಂತ್ರಜ್ಞಾನ, ಬಾಹ್ಯಾಕಾಶ ತಂತ್ರಜ್ಞಾನ, ವೈದ್ಯಕೀಯ ವಿಜ್ಞಾನ ಕ್ಷೇತ್ರದಲ್ಲಿ ಜಗತ್ತೆ ನಿಬ್ಬೆರಗಾಗಿಸುವ ಸಾಧನೆ ಮಾಡಲಾಗಿದೆ. ಇದರ ನಡುವೆ ದೇಶದಲ್ಲಿ ಭ್ರಷ್ಟಾಚಾರ ನಿಯಂತ್ರಣ ಮೀರಿ ಹೆಚ್ಚುತ್ತಿದ್ದು ಪಂಚಾಯತ್ ಮಟ್ಟದಿಂದ ಪಾರ್ಲಿಮೆಂಟ್ ತನಕ ಹಣಕೊಡದಿದ್ದರೆ ಯಾವುದೇ ಕೆಲಸವಾಗುವುದಿಲ್ಲ ಎಂಬುದು ದೇಶ ಪ್ರತಿಯೊಬ್ಬ ಸಾಮಾನ್ಯ ಪ್ರಜೆಯ ಗಮನಕ್ಕೂ ಬಂದ ಕಟು ಸತ್ಯವಾಗಿದೆ. ಪೊಲೀಸ್ ಠಾಣೆ, ಕಂದಾಯ ಇಲಾಖೆ, ನೋಂದಣಿ ಕಚೇರಿಗಳು, ಸರ್ಕಾರಿ ಆಸ್ಪತ್ರೆಗಳ ಸಹಿತ ಸರ್ಕಾರದ ಪ್ರತಿಯೊಂದು ಕಚೇರಿಗಳಲ್ಲಿ ಭ್ರಷ್ಟಾಚಾರ ಎಗ್ಗಿಲ್ಲದೆ ನಡೆಯುತ್ತಿದ್ದು ಸ್ವತಂತ್ರ ಭಾರತದ ಪ್ರಜೆಗಳು ವ್ಯವಸ್ಥೆಯ ಮೇಲಿನ ವಿಶ್ವಾಸವನ್ನೆ ಕಳೆದುಕೊಂಡಿದ್ದಾರೆ.

ಭ್ರಷ್ಟಾಚಾರ ಎಷ್ಟು ಮಿತಿಮೀರಿದೆ ಎಂದರೆ ಕೊರೋನಾ ಸಾಂಕ್ರಾಮಿದಲ್ಲಿ ತಮ್ಮ ಬಂಧು ಬಾಂಧವರನ್ನು ಕಳೆದುಕೊಂಡ ಬಡವರು ಹೆಣ ಪಡಯಲು ಹಣ ಪಾವತಿಸಲಾಗದೆ ಆಸ್ಪತ್ರೆಗಳಲ್ಲಿ ಹೆಣ ಬಿಟ್ಟುಹೋದ ಪ್ರಸಂಗಗಳು. ಸ್ಮಶಾನಗಳಲ್ಲಿ ಅಂತ್ಯಸಂಸ್ಕಾರ ನಡೆಸಲು ಸಿಬ್ಬಂದಿಗಳುಕೇಳಿದ ಲಂಚದ ಹಣ ಪಾವತಿಸಲು ಸಾಧ್ಯವಾಗದೆ ಶವಗಳನ್ನುಗಂಗಾ ನದಿಯಲ್ಲಿ ಎಸೆದ ಪ್ರಕರಣಗಳು ನಾಗರಿಕ ಜಗತ್ತು ತಲೆತಗ್ಗಿಸುವಂತೆ ಮಾಡಿದೆ. ಮಗುವಿನ ಜನ್ಮದಿಂದ ಸಾಯುವ




ತನಕ ಲಂಚಾತಾರದ ಕಬಂಧ ಬಾಹುವಿಗೆ ಸಿಲುಕಿ ಜನಸಾಮಾನ್ಯರು ಒದ್ದಾಡುತ್ತಿರುವುದು ಸ್ವಾತಂತ್ರ್ಯ ವ್ಯವಸ್ಥೆಯನ್ನು ಅಣಕಿಸಿದಂತಾಗಿದೆ. ಭ್ರಷ್ಟ ವ್ಯವಸ್ಥೆಯನ್ನು ಪೋಷಿಸಲು ಸ್ವಾತಂತ್ರ್ಯ ಪಡೆದಂತಾಗಿದೆ ಎಂಬುದು ಜನ ಸಾಮಾನ್ಯರ ನೋವಿನ ಧ್ವನಿಯಾಗಿದೆ.

ಇನ್ನೂ ಜಾತಿ ವ್ಯವಸ್ಥೆಯಂತೂ ದೇಶ ದೇಶದ ಏಕತೆ, ಸೌಹಾರ್ಧತೆ ಹಾಗೂ ಜಾತ್ಯಾತೀತೆಗೆ ದೊಡ್ಡ ಸವಾಲಾಗಿದ್ದು, ರಾಜಕೀಯ ನಾಯಕರು ತಮ್ಮ ಅಧಿಕಾರಕ್ಕಾಗಿ ಜಾತಿ ವ್ಯವಸ್ಥೆ ಮುನ್ನೆಲೆಗೆ ತಂದು ಅದು ಬಲಿಷ್ಠವಾಗುವಂತೆ ಮಾಡಲು ಮೂಲಕಾರಣರಾಗಿದ್ದಾರೆ. ಜಾತಿ ವ್ಯವಸ್ಥೆ ದೇಶದ ಒಕ್ಕೂಟ ಹಾಗೂ ಜಾತ್ಯಾತೀತ ವ್ಯವಸ್ಥೆಯನ್ನು ಹಾಳುಮಾಡುವ ಗೆದ್ದಲು ಹುಳದಂತಾಗಿದೆ. ಮೀಸಲಾತಿ ಸೌಲಭ್ಯ, ಮುಖ್ಯಮಂತ್ರಿ, ಸಚಿವರ ಹುದ್ದೆಗಳಿಗೆ ಅರ್ಹತೆ, ಸಾಮರ್ಥ್ಯ, ಪ್ರಾಮಾಣಿಕತೆ, ಸೇವಾ ಮನೋಭಾವನೆ ನೋಡುವ ಬದಲು ಜಾತಿ ಪ್ರಾಬಲ್ಯ ನೋಡಿ ಆಯ್ಕೆ ಮಾಡುವುದು ಪ್ರಜಾಪ್ರಭುತ್ವ ವ್ಯವಸ್ಥೆಯ ಮೇಲೆ ನಂಬಿಕೆ ಕಳೆದುಕೊಳ್ಳುವಂತೆ ಮಾಡಿದೆ.

## ಭಾರತದ ಸ್ವಾತಂತ್ರ್ಯದ ಸಂಕ್ಷಿಪ್ತ ಪರಿಚಯ

ಎರಡು ಸುದೀರ್ಘ ಶತಮಾನಗಳ ಕಾಲ ಆಳಿದ ಬ್ರಿಟಿಷರು ತಮ್ಮ ಅಧಿಕಾರವನ್ನು ಭಾರತಕ್ಕೆ ಬಿಟ್ಟುಕೊಟ್ಟ ನಂತರ 1947 ರ ಆಗಸ್ಟ್‌ನಲ್ಲಿ ಲಕ್ಷಾಂತರ ಭಾರತೀಯರ ಹೋರಾಟವು ಫಲ ನೀಡಿತು. ಆಗಿನ ಮಧ್ಯಂತರ ಪ್ರಧಾನ ಮಂತ್ರಿ ಪಂಡಿತ್ ಜವಾಹರಲಾಲ್ ನೆಹರು ಅವರು 1947 ರ ಆಗಸ್ಟ್ 14/15 ರಂದು ಮಧ್ಯರಾತ್ರಿ ತಮ್ಮ ಭಾಷಣದಲ್ಲಿ ಶಾಶ್ವತ ಭರವಸೆಯ ರಾಷ್ಟ್ರದ ಭರವಸೆಯನ್ನು ಸುಂದರವಾಗಿ ಸೆರೆಹಿಡಿದಿದ್ದರು.

ಬಹಳ ವರ್ಷಗಳ ಹಿಂದೆ, ನಾವು ನಿರ್ಧಿಷ್ಟ ಗುರಿಯೊಂದಿಗೆ ಪ್ರಯತ್ನ ಮಾಡಿದ್ದೇವೆ, ಮತ್ತು ಈಗ ನಾವು ನಮ್ಮ ಪ್ರತಿಜ್ಞೆಯನ್ನು ಸಂಪೂರ್ಣವಾಗಿ ಅಥವಾ ಪೂರ್ಣ ಪ್ರಮಾಣದಲ್ಲಿ ಅಲ್ಲ, ಆದರೆ ಗಣನೀಯವಾಗಿ ಪುನಃ ಪಡೆದುಕೊಳ್ಳುವ ಸಮಯ ಬರುತ್ತದೆ. ಮಧ್ಯರಾತ್ರಿಯ ಗಂಟೆಯ ಹೊಡೆತದಲ್ಲಿ, ಜಗತ್ತು ನಿದ್ರಿಸಿದಾಗ, ಭಾರತವು ಜೀವನ ಮತ್ತು ಸ್ವಾತಂತ್ರ್ಯವನ್ನು ಎಚ್ಚರಿಸುತ್ತದೆ ಎಂದು ನೆಹರೂ ಅವರು ಸಂವಿಧಾನ ಸಭೆಯ ಮುಂದೆ ಹೇಳಿದರು.

ಫೆಬ್ರವರಿ 1947ರಲ್ಲಿ ಹೌಸ್ ಆಫ್ ಕಾಮನ್ಸ್‌ನಲ್ಲಿ ಅವರು ಮಾಡಿದ ಭಾಷಣದಲ್ಲಿ, ಬ್ರಿಟಿಷ್ ಪ್ರಧಾನಿ ಕ್ಲೆಮೆಂಟ್ ಅಟ್ಲೀ ಜೂನ್ 30,1948 ಅನ್ನು ಭಾರತೀಯ ನಾಯಕರಿಗೆ ಅಧಿಕಾರ ವರ್ಗಾವಣೆಯ ಗಡುವು ಎಂದು ನಿಗದಿಪಡಿಸಿದರು. ಆದರೆ ನಾಲ್ಕು ತಿಂಗಳ ನಂತರ, ಭಾರತೀಯ ವೈಸ್‌ರಾಯ್ ಲಾರ್ಡ್ ಮೌಂಟ್ ಬ್ಯಾಟನ್ 1947 ರ ಆಗಸ್ಟ್ 15 ರಂದು ಅಧಿಕಾರ ವರ್ಗಾವಣೆ ನಡೆಯುವ ದಿನವೆಂದು ಘೋಷಿಸಿದರು.

ಭಾರತೀಯ ಸ್ವಾತಂತ್ರ್ಯ ಕಾಯ್ದೆಯನ್ನು ಜುಲೈ 4,1947 ರಂದು ಬ್ರಿಟಿಷ್ ಹೌಸ್ ಆಫ್ ಕಾಮನ್ಸ್‌ನಲ್ಲಿ ಪರಿಚಯಿಸಲಾಯಿತು ಮತ್ತು ಹದಿನೈದು ದಿನಗಳಲ್ಲಿ ಅಂಗೀಕರಿಸಲಾಯಿತು, ಇದರಲ್ಲಿ ಆಗಸ್ಟ್ 15 ರಂದು ಬ್ರಿಟಿಷ್ ಆಡಳಿತವು ಅಂತ್ಯಗೊಳ್ಳಲಿದೆ ಎಂದು ನಿರ್ಧರಿಸಲಾಯಿತು.

ಆದರೆ, ಈ ದಿನಾಂಕವು ಇದ್ದಕ್ಕಿದ್ದಂತೆ ಹೊರಬಂದಿತ್ತು. 'ಫ್ರೀಡಂ ಅಟ್ ಮಿಡ್‌ನೈಟ್'ನಲ್ಲಿ ಉಲ್ಲೇಖಿಸಿದಂತೆ ಮೌಂಟ್ ಬ್ಯಾಟನ್, ನಾನು ಆಯ್ಕೆ ಮಾಡಿದ ದಿನಾಂಕವು ಇದ್ದಕ್ಕಿದ್ದಂತೆ ಹೊರಬಂದಿದೆ. ಪ್ರಶ್ನೆಗೆ





ಉತ್ತರವಾಗಿ ನಾನು ಅದನ್ನು ಆಯ್ಕೆ ಮಾಡಿದೆ. ಇಡೀ ಘಟನೆಯ ಮಾಸ್ಟರ್ ನಾನು ಎಂದು ತೋರಿಸಲು ನಾನು ನಿರ್ಧರಿಸಿದೆ. ನಾವು ದಿನಾಂಕವನ್ನು ನಿಗದಿಪಡಿಸಿದ್ದೀರಾ ಎಂದು ಅವರು ಕೇಳಿದಾಗ, ಅದು ಶೀಘ್ರದಲ್ಲೇ ಇರಬೇಕೆಂದು ನನಗೆ ತಿಳಿದಿತ್ತು. ನಾನು ಆ ಬಗ್ಗೆ ನಿಖರವಾಗಿ ಕೆಲಸ ಮಾಡಿರಲಿಲ್ಲ. ಅದು ಆಗಸ್ಟ್ ಅಥವಾ ಸೆಪ್ಟೆಂಬರ್ ಆಗಿರಬೇಕು ಎಂದು ನಾನು ಭಾವಿಸಿದ್ದೆ. ಮತ್ತು ನಂತರ ನಾನು ಆಗಸ್ಟ್ 15 ಎಂದು ನಿರ್ಧರಸಿದೆ. ಏಕೆ? ಏಕೆಂದರೆ ಇದು ಜಪಾನ್‌ನ ಶರಣಾಗತಿಯ ಎರಡನೇ ವಾರ್ಷಿಕೋತ್ಸವವಾಗಿತ್ತು. ಆಗಸ್ಟ್ 15, 1945 ರಂದು, ಜಪಾನಿನ ಚಕ್ರವರ್ತಿ ಹಿರೋಹಿಟೊ ತನ್ನ ರೆಕಾರ್ಡ್ ಮಾಡಿದ ರೇಡಿಯೊ ಹೇಳಿಕೆಯಲ್ಲಿ ಮಿತ್ರರಾಷ್ಟ್ರಗಳ ಮುಂದೆ ಜಪಾನ್ ಶರಣಾಗತಿಯನ್ನು ಘೋಷಿಸಿದ. ವಿಳಾಸವನ್ನು ನಂತರ ಜ್ಯುವೆಲ್‌ಧ್ವನಿ ಪ್ರಸಾರ ಎಂದು ಕರೆಯಲಾಯಿತು.

ಸಿರಿಲ್ ರಾಡ್‌ಕ್ಲಿಫ್ ಭಾರತೀಯ ಉಪಖಂಡವನ್ನು ಎರಡು ಭಾಗವಾಗಿಸುವ ಕಾರ್ಯದೊಂದಿಗೆ ಜುಲೈ 8,1947ರಂದು ಭಾರತಕ್ಕೆ ಬಂದರು. ಪಂಜಾಬ್ ಮತ್ತು ಬಂಗಾಳದ ವಿಭಜನೆಯು ಅತ್ಯಂತ ವಿವಾದಾಸ್ಪದವಾಗಿತ್ತು. ಏಕೆಂದರೆ ಅವರಲ್ಲಿ ಯಾರೊಬ್ಬರೂ ಹಿಂದೂಗಳು ಅಥವಾ ಮುಸ್ಲಿಮರಲ್ಲಿ ಹೆಚ್ಚಿನ ಸಂಖ್ಯೆಯಾಗಿರಲಿಲ್ಲ. ಎರಡು ರಾಜ್ಯಗಳಿಗೆ ರಾಡ್‌ಕ್ಲಿಫ್ ಅವಾರ್ಡ್‌ಅನ್ನು ಆಗಸ್ಟ್ 16, 1947 ರಂದು ಮೌಂಟ್ ಬ್ಯಾಟನ್ ಘೋಷಿಸಿದರು. ಹೀಗೆ, ಸ್ವಾತಂತ್ರ್ಯದ ನಂತರವೂ ಎರಡು ರಾಜ್ಯಗಳ ಜನರು ತಾವು ಭಾರತ ಅಥವಾ ಪಾಕಿಸ್ತಾನದ ಭಾಗವಾಗುತ್ತಾರೆಯೇ ಎಂದು ತಿಳಿದಿರಲಿಲ್ಲ.

ಭಾರತವು ಸ್ವಾತಂತ್ರ್ಯದತ್ತ ಸಾಗುತ್ತಿರುವಾಗ, 500ಕ್ಕೂ ಹೆಚ್ಚು ರಾಜರ ಆಳ್ವಿಕೆಯಲ್ಲಿದ್ದ ರಾಜ್ಯಗಳಿದ್ದವು. ಅರೆ ಸ್ವಾಯತ್ತ ಸಾಮ್ರಾಜ್ಯಗಳು ರಾಜರಿಂದ ಆಳಲ್ಪಟ್ಟವು. ವಿಭಜನೆಯ ನಂತರದ ಭಾರತದ ಗಡಿಯೊಳಗಿದ್ದ ಬಹುತೇಕ ಎಲ್ಲರೂ ಭಾರತೀಯ ಒಕ್ಕೂಟಕ್ಕೆ ಸೇರಲು ಒಪ್ಪಿದರು. ಆದರೆ, ಮೂರು ರಾಜ್ಯಗಳು ನಿರಾಕರಿಸಿದ್ದವು.

ಹೈದರಾಬಾದ್ ಹಿಂದೂ ಬಹುಸಂಖ್ಯಾತ ರಾಜ್ಯವಾಗಿದ್ದು, ಸ್ವಾತಂತ್ರ್ಯ ಘೋಷಿಸಿದ ನಿಜಾಮ್ ಮಿರ್ ಉಸ್ಮಾನ್ ಅಲಿ ಆಳ್ವಿಕೆ ನಡೆಸಿದರು. ಭಾರತ ಸರ್ಕಾರವು ಸೆಪ್ಟೆಂಬರ್ 13, 1948 ರಂದು ಆಪರೇಷನ್ ಪೋಲೊವನ್ನು ಪ್ರಾರಂಭಿಸಿತು ಮತ್ತು ನಾಲ್ಕು ದಿನಗಳಲ್ಲಿ, ಭಾರತೀಯ ಸೇನೆಯು ರಾಜ್ಯದ ಮೇಲೆ ಹಿಡಿತ ಸಾಧಿಸಿತು.

ಜುನಾಗಢ, ಮತ್ತೊಂದು ಹಿಂದೂ ಬಹುಸಂಖ್ಯಾತ ರಾಜ್ಯವನ್ನು ನವಾಬ್ ಮಹಮ್ಮದ್ ಮಹಾಬತ್ ಖಾಂಜಿ III ಆಳಿದರು, ಅವರು ತಮ್ಮ ರಾಜ್ಯಗಳನ್ನು ಪಾಕಿಸ್ತಾನದೊಂದಿಗೆ ವಿಲೀನಗೊಳಿಸುವುದಾಗಿ ಘೋಷಿಸಿದರು. ಜನಾಭಿಪ್ರಾಯ ಸಂಗ್ರಹವನ್ನು ಫೆಬ್ರವರಿ 20, 1948 ರಂದು ನಡೆಸಲಾಯಿತು, ಇದರಲ್ಲಿ 91% ಮತದಾರರು ಭಾರತಕ್ಕೆ ಸೇರಲು ನಿರ್ಧರಿಸಿದರು.

ಕಾಶ್ಮೀರದ ಪರಿಸ್ಥಿತಿ ಇದಕ್ಕೆ ತದ್ವಿರುದ್ಧವಾಗಿತ್ತು. ಇದು ಮಹಾರಾಜ ಹರಿ ಸಿಂಗ್ ಆಳ್ವಿಕೆಯ ಮುಸ್ಲಿಂ ಬಹುಸಂಖ್ಯಾತ ರಾಜ್ಯವಾಗಿದ್ದು, ಭಾರತ ಅಥವಾ ಪಾಕಿಸ್ತಾನಕ್ಕೆ ಸೇರಿಕೊಳ್ಳದಿರಲು ನಿರ್ಧರಿಸಿತು. ಆದರೆ ಅಕ್ಟೋಬರ್ 1947 ರಲ್ಲಿ ಪಾಕಿಸ್ತಾನದ ಬುಡಕಟ್ಟು ಆಕ್ರಮಣದ ನಂತರ, ಮಹಾರಾಜರು ಭಾರತದ ಸಹಾಯವನ್ನು ಕೋರಿದರು, ಅದು ಅವರು ಭಾರತಕ್ಕೆ ಸೇರಲು ಒಪ್ಪಿಗೆ ನೀಡಿ ಸಹಿ ಹಾಕಿದ ನಂತರ ಸೈನ್ಯವನ್ನು ಕಳುಹಿಸಲು ಒಪ್ಪಿದರು. ಅವರು ಅಕ್ಟೋಬರ್ 26, 1947 ರಂದು ಒಪ್ಪಂದಕ್ಕೆ ಸಹಿ ಹಾಕಿದರು, ಅದರ ನಂತರ ಜಮ್ಮು ಮತ್ತು ಕಾಶ್ಮೀರ ಭಾರತೀಯ ಒಕ್ಕೂಟದ ಭಾಗವಾಯಿತು.

ಭಾರತದ ರಾಷ್ಟ್ರಗೀತೆ ಜನ ಗಣ ಮನ ಕವಿ ರವೀಂದ್ರನಾಥ ಟ್ಯಾಗೋರ್ ಬರೆದಿದ್ದಾರೆ ಮತ್ತು ಇದನ್ನು ಮೊದಲ ಬಾರಿಗೆ 1911 ರ ಡಿಸೆಂಬರ್ 27 ರಂದು ಭಾರತೀಯ ರಾಷ್ಟ್ರೀಯ ಕಾಂಗ್ರೆಸ್ಸಿನ ಕಲ್ಕತ್ತಾ ಅಧಿವೇಶನದಲ್ಲಿ ಹಾಡಲಾಯಿತು. ಆದರೂ, ಭಾರತದ ಮೊದಲ ಗಣರಾಜ್ಯೋತ್ಸವವನ್ನು ಆಚರಿಸುವ ಎರಡು ದಿನಗಳ ಮೊದಲು, ಜನವರಿ 24, 1950 ರಂದು ಇದನ್ನು ರಾಷ್ಟ್ರಗೀತೆಯಾಗಿ ಸ್ವೀಕರಿಸಲಾಯಿತು.

ಭಾರತ ತನ್ನ ಸ್ವಾತಂತ್ರ್ಯ ದಿನವನ್ನು ಇತರ ಐದು ದೇಶಗಳೊಂದಿಗೆ ಹಂಚಿಕೊಂಡಿದೆ: ಉತ್ತರ ಮತ್ತು ದಕ್ಷಿಣ ಕೊರಿಯಾ (ಜಪಾನ್‌ನಿಂದ), ಲಿಚ್ಟೆನ್‌ಸ್ಟೈನ್ (ಜರ್ಮನಿಯಿಂದ), ಕಾಂಗೋ ಗಣರಾಜ್ಯ (ಫ್ರಾನ್ಸ್‌ನಿಂದ) ಮತ್ತು ಬಹ್ರೇನ್ (ಬ್ರಿಟನ್‌ನಿಂದ).

**▸▸ ಮಂಜುನಾಥ್ ನಾಯ್ಕ್**
ಹಿರಿಯ ಪತ್ರಕರ್ತರು. ಬೆಂಗಳೂರು.



# 97 ಸಂವಿಧಾನ ತಿದ್ದುಪಡಿ
# ಭಾಗ IX ಬಿ– ರದ್ಧತಿ – ಒಂದು ಚಿಂತನೆ

▶▶ ಶಶಿಧರ ಎಲೆ, ಸಹಕಾರ ಸಂಘಗಳ ಅಪರ ನಿಬಂಧಕರು (ನಿ)

ಭಾರತದ ಸಹಕಾರ ಚಳುವಳಿಯಲ್ಲಿ ಒಂದು ಮೈಲಿಗಲ್ಲು ಎಂದು ಪರಿಗಣಿಸಲ್ಪಟ್ಟ 97ನೇ ಸಂವಿಧಾನ ತಿದ್ದುಪಡಿ ಇದರ ಭಾಗ ಫಿಖಬಿ ಯನ್ನು ರಾಜ್ಯಗಳಿಗೆ ಸಂಬಂಧಿಸಿದಂತೆ ಮಾನ್ಯ ಸರ್ವೋಚ್ಛ ನ್ಯಾಯಾಲಯವು ದಿನಾಂಕ 20ನೇ ಜುಲೈ 2021 ರಲ್ಲಿ ನೀಡಿದ ತೀರ್ಪಿನಲ್ಲಿ ರದ್ದುಪಡಿಸಿದೆ. 'ಸಹಕಾರ' ಸಂವಿಧಾನದ 'ರಾಜ್ಯಪಟ್ಟಿ'ಯಲ್ಲಿನ ವಿಷಯವಾಗಿರುತ್ತದೆ. ಅರ್ಧ ರಾಜ್ಯಗಳ ಸಹಮತವನ್ನು ಪಡೆಯದೇ ಸಂವಿಧಾನ ತಿದ್ದುಪಡಿ ಮಾಡುವಂತಿಲ್ಲ ಎಂದು ಮಾನ್ಯ ಗುಜರಾತ್ ಉಚ್ಛ ನ್ಯಾಯಾಲಯ ನೀಡಿದ ತೀರ್ಪನ್ನು ಎತ್ತಿ ಹಿಡಿದಿದೆ. ಪಟ್ಟಿಯಲ್ಲಿನ ವಿಷಯಗಳ ಬಗ್ಗೆ ಯಾವುದೆ ಬದಲಾವಣೆ ಮಾಡಿರುವುದಿಲ್ಲವಾದುದರಿಂದ ಈ ತಿದ್ದುಪಡಿಯನ್ನು ಎತ್ತಿಹಿಡಿಯಬಹುದು ಎಂಬ ವಾದವನ್ನು ತಳ್ಳಿಹಾಕಿದೆ. ಬಹುರಾಜ್ಯ ಸಹಕಾರ ಕಾಯಿದೆಗೆ ಈ ತಿದ್ದುಪಡಿಯ ಅನ್ವಯಿಸುವಿಕೆಯನ್ನು ಒಪ್ಪಿದೆ.

97ನೇ ಸಂವಿಧಾನ ತಿದ್ದುಪಡಿಯ ಭಾಗವಾದ ಅನುಚ್ಛೇದ 19(1)ಸಿ ಯಂತೆ 'ಸಹಕಾರ ಸಂಘವನ್ನು ರಚಿಸುವುದು ಭಾರತೀಯ ಪ್ರಜೆಯ ಮೂಲಭೂತ ಹಕ್ಕು ಆಗಿ ಪರಿಗಣಿಸಿರುವುದು, ಅನುಚ್ಛೇದ 43ಬಿ ಅನ್ವಯ ರಾಜ್ಯಗಳು ತಮ್ಮ ಕಾಯ್ದೆಗಳಲ್ಲಿ ಸಹಕಾರ ಸಂಘಗಳ ಸ್ವಯಂಪ್ರೇರಿತ ರಚನೆ, ಸ್ವಾಯತ್ತ ಕಾರ್ಯನಿರ್ವಹಣೆ, ಪ್ರಜಾಸತ್ತಾತ್ಮಕ ನಿಯಂತ್ರಣ ಮತ್ತು ವೃತ್ತಿಪರ ನಿರ್ವಹಣೆಗೆ ಪ್ರೋತ್ಸಾಹ ನೀಡುವುದು' ಎಂಬ ಈ ವಿಷಯಗಳಿಗೆ ಯಾವುದೇ ಬಾಧ್ಯತೆ ಉಂಟಾಗಿರುವುದಿಲ್ಲ.

97ನೆ ಸಂವಿಧಾನ ತಿದ್ದುಪಡಿಯ ಭಾಗ IX ಬಿ ಯ ಉದ್ದೇಶವು ಭಾರತದ ಸಹಕಾರ ಚಳುವಳಿಯ ಬೆಳವಣಿಗೆ ದೃಷ್ಠಿಯಿಂದ ಮತ್ತು ಎಲ್ಲ ಸಹಕಾರ ಸಂಘಗಳಲ್ಲಿನ ಆಡಳಿತ, ವ್ಯವಸ್ಥಾಪನೆ, ಸಹಕಾರ ಮೌಲ್ಯಗಳ, ತತ್ವಗಳ ಬದ್ಧತೆಗೆ ಕಾರಣವಾಗಿತ್ತು. ಆದರೂ ಸಂವಿಧಾನಬದ್ಧವಾದ ರಾಜ್ಯ, ಒಕ್ಕೂಟ ನಡುವಿನ ಅಂತರ ಸಂಬಂಧಗಳನ್ನು ಕಾಪಾಡುವುದರಲ್ಲಿ ಈ ತಿದ್ದುಪಡಿ ತೊಡಕಾಗಿ ಕಂಡುಬಂದಿದ್ದರಿಂದ ಸರ್ವೋಚ್ಛ ನ್ಯಾಯಲಯವು ಈ ಭಾಗವನ್ನು ರಾಜ್ಯಗಳಿಗೆ ಸಂಬಂಧಿಸಿದಂತೆ ರದ್ದುಗೊಳಿಸಿದೆ. ರಾಷ್ಟ್ರದ ಹದಿನೇಳು ರಾಜ್ಯಗಳಲ್ಲಿ ಈ ತಿದ್ದುಪಡಿಯನ್ನು ಅಳವಡಿಸಿಕೊಂಡಿವೆ ಎಂಬ ಅಂಶವನ್ನು ನ್ಯಾಯಾಲಯವು ಗಮನಿಸಿದೆಯಾದರೂ ಈ ಕಾರಣಕ್ಕಾಗಿ ಇದನ್ನು ರಾಜ್ಯಗಳಿಗೆ ಅನ್ವಯಿಸಲಾಗುವುದಿಲ್ಲ ಎಂದು ಸ್ಪಷ್ಟಪಡಿಸಿದೆ.

ಈ ಹದಿನೇಳು ರಾಜ್ಯಗಳಲ್ಲಿ 'ಕರ್ನಾಟಕ' ವೂ ಒಂದು. ಮಾನ್ಯ ಸರ್ವೋಚ್ಛ ನ್ಯಾಯಾಲಯವು ಈ 'IX ಬಿ' ಅನ್ವಯತೆಯನ್ನು ರದ್ದುಗೊಳಿಸಿರುವುದರಿಂದ ಕರ್ನಾಟಕದಲ್ಲಿನ ಸಹಕಾರ ಕಾಯ್ದೆಗಳಲ್ಲಿ ಇದನ್ನು ಆಧರಿಸಿ ಆಗಿರುವ ತಿದ್ದುಪಡಿಗಳು, ಅವುಗಳನ್ನು ಅನುಷ್ಠಾನಗೊಳಿಸುವಲ್ಲಿ ಆಗಿರುವ, ಆಗುತ್ತಿರುವ ಎಡರು ತೊಡರುಗಳು, ತೊಡಕುಗಳು ಮತ್ತು ಇವುಗಳ ನಿವಾರಣೆಗೆ ತೆಗೆದುಕೊಳ್ಳಬೇಕಾದ ಕ್ರಮಗಳ ಬಗ್ಗೆ ಚರ್ಚೆ, ವಿಶ್ಲೇಷಣೆಯ ಅಗತ್ಯತೆ ಕಂಡುಬರುತ್ತದೆ. ಇದರ ಬಗ್ಗೆ 'ಚಿಂತನ–ಮಂತನ' ನಡೆದು ದೊರಕಿರುವ 'ಸ್ವಾತಂತ್ರ್ಯ'ವನ್ನು ಸದುಪಯೋಗಪಡಿಸಿಕೊಂಡು 'ಸಹಕಾರ ಚಳುವಳಿ'ಯ ಬೆಳವಣಿಗೆಗೆ ಇಂಬುಕೊಡುವ ದೃಷ್ಠಿಕೋನದಲ್ಲಿ ಚಿಂತಿಸಿ ಅನುಷ್ಠಾನಗೊಳಿಸಲು ಅವಕಾಶ ಕೂಡಿಬಂದಿದೆ.

### ಮತದಾನದ ಹಕ್ಕು, ಚುನಾವಣೆ, ಮಹಾಸಭೆ :

ಸಹಕಾರ ಸಂಘಗಳು ಯಶಸ್ವಿಯಾಗಿ ಕಾರ್ಯ ನಿರ್ವಹಿಸುವಲ್ಲಿ ಸದಸ್ಯರ ಭಾಗವಹಿಸುವಿಕೆ ಅತಿಮುಖ್ಯ. ಏಕೆಂದರೆ, ಅದರ 'ಯಜಮಾನರು' ಅವರೇ, ಅದರ 'ಗ್ರಾಹಕರು' ಅವರೇ ಆಗಿರುತ್ತಾರೆ. ಅನುಚ್ಛೇದ 243 ZI (ಝಡ್ಐ) ನಂತೆ ಸ್ವಇಚ್ಛೆಯ ರಚನೆ, ಸದಸ್ಯರ ಪ್ರಜಾಸತ್ತಾತ್ಮಕ ನಿಯಂತ್ರಣ, ಸದಸ್ಯರ ಆರ್ಥಿಕ ಭಾಗವಹಿಸುವಿಕೆ ಮತ್ತು ಸ್ವಾಯತ್ತ ಕಾರ್ಯಾಚರಣೆ ತತ್ವಗಳಿಗೆ ಕಾಯ್ದೆಯಲ್ಲಿ ಅವಕಾಶ ಕಲ್ಪಿಸಬೇಕು. ಇದರಂತೆ ಕರ್ನಾಟಕ ರಾಜ್ಯ ಸಹಕಾರ ಸಂಘಗಳ ಕಾಯ್ದೆ 1959 ಕಲಂ 27–ಎ ನಲ್ಲಿ ಇದನ್ನು ಖಾತ್ರಿಪಡಿಸಿಕೊಳ್ಳಲು ಸದಸ್ಯರ ಕನಿಷ್ಠ ಭಾಗವಹಿಸುವಿಕೆ ಭಾಗವಾಗಿ 'ಕಳೆದ ಐದು ವಾರ್ಷಿಕ ಮಹಾಸಭೆಗಳಲ್ಲಿ ಕನಿಷ್ಠ ಮೂರು ಸಭೆಗಳಲ್ಲಿ ಭಾಗವಹಿಸಿರಬೇಕು ಮತ್ತು ಉಪನಿಯಮಗಳಲ್ಲಿ ತಿಳಿಸಿದಂತೆ ಪ್ರತಿವರ್ಷ ಸಂಘ ಒದಗಿಸುವ ಕನಿಷ್ಠ ಸೇವೆ ಸೌಲಭ್ಯವನ್ನು ಉಪಯೋಗಿಸಬೇಕು ಇಲ್ಲದಿದ್ದಲ್ಲಿ ಮುಂದಿನ ಮೂರು ವರ್ಷಗಳು ಮತದಾನದ ಹಕ್ಕು ಕಳೆದುಕೊಳ್ಳುತ್ತಾನೆ.' ಕಲಂ 20 (a-IV) ನಂತೆ ಕಳೆದ ಐದು ಸಾಮಾನ್ಯ ಸಭೆಗಳಲ್ಲಿ ಕನಿಷ್ಠ ಮೂರು ಸಭೆಗಳಿಗೆ ಹಾಜರಾಗದಿದ್ದಲ್ಲಿ, ಕಲಂ 20 (a-V) ನಂತೆ ಸತತ ಮೂರು ವರ್ಷಗಳಲ್ಲಿ ಉಪನಿಯಮಗಳಲ್ಲಿ ತಿಳಿಸಿದಂತೆ ಕನಿಷ್ಠ ಸೇವೆ ಸೌಲಭ್ಯ ಉಪಯೋಗಿಸಿಕೊಳ್ಳದಿದ್ದಲ್ಲಿ ಸದಸ್ಯ ತನ್ನ ಮತದಾನದ ಹಕ್ಕನ್ನು ಕಳೆದುಕೊಳ್ಳುತ್ತಾನೆ.

ಈ ಕಾಯ್ದೆ ಅಂಶಗಳು ಸಹಕಾರ ಸಂಘಗಳಲ್ಲಿ ಎಷ್ಟರಮಟ್ಟಿಗೆ ಅನುಷ್ಠಾನಕ್ಕೆ ಬಂದಿದೆ ಎಂಬುದನ್ನು ವಿವೇಚನಾಯುತವಾಗಿ ಪರಮಾರ್ಶಿಸಬೇಕಾಗಿದೆ. ಕರ್ನಾಟಕ ರಾಜ್ಯ ಸಹಕಾರ ಸಂಘಗಳ ನಿಯಮ 14 AJ (1) ರೀತ್ಯ 'ಸಾಮಾನ್ಯ ನಿಕಾಯ'ದ ಸಭೆಗೆ ಎಲ್ಲ ಸದಸ್ಯರಿಗೂ ತಿಳುವಳಿಕೆ ಪತ್ರ ನೀಡಬೇಕು. ಆದರೆ 14 AJ (5) ರ ರೀತ್ಯ 'ಮತದಾನ ಹಕ್ಕುಳ್ಳ' ಸದಸ್ಯರ ಶೇ. ಹತ್ತು ಅಥವಾ ಒಂದು ಸಾವಿರ ಅದರಲ್ಲಿ ಯಾವುದು ಕಡಿಮೆಯೋ ಅದು 'ಕನಿಷ್ಠ ಅವಶ್ಯ ಹಾಜರಾತಿ' ಸಂಖ್ಯೆ (ಕೋರಂ) ಆಗುತ್ತದೆ. ಈ ರೀತಿಯಲ್ಲಿ 'ಗಣಕ' ಎಷ್ಟು ಸಹಕಾರ ಸಂಘಗಳಲ್ಲಿ ಸಾಧ್ಯವಾಗಿದೆ. ಈ ರೀತಿಯ ಅಗತ್ಯತೆ ಪೂರೈಕೆಗೆ ಅವಶ್ಯ ದಾಖಲಾತಿಗಳನ್ನು ನಿರ್ವಹಿಸಲಾಗುತ್ತಿದೆ ಎಂಬುದು ಒಂದು ಪ್ರಮುಖ ಪ್ರಶ್ನೆ. ಆಡಳಿತ ಮಂಡಳಿ ಚುನಾವಣೆಗೆ ಸಂಬಂಧಿಸಿದಂತೆ ಕಲಂ 20 (a-IV) ಮತ್ತು (a-V) ನ್ನು ಪ್ರಶ್ನಿಸಿರುವ ಅರ್ಜಿ ಮಾನ್ಯ ಕರ್ನಾಟಕ ಉಚ್ಛ ನ್ಯಾಯಾಲಯದ ಮುಂದೆ ಬಾಕಿ ಇದೆ. ಮಧ್ಯಂತರ ಆದೇಶದ ಮೂಲಕ ಹಲವಾರು ಅರ್ಜಿದಾರರು 'ಮತದಾನದ ಹಕ್ಕು' ಪಡೆದಿರುವುದು ನಮ್ಮ ಮುಂದೆ ಇದೆ. 97ನೇ

ಸಂವಿಧಾನದ ತಿದ್ದುಪಡಿ ಭಾಗ IXB ರದ್ದತಿಯಿಂದಾಗಿ ಮಾನ್ಯ ಉಚ್ಚ ನ್ಯಾಯಾಲಯವು ಈ 'ಅವಕಾಶ'ಗಳ ಬಗ್ಗೆ ಪರಾಮರ್ಶೆ ಮಾಡಿ ಅಂತಿಮ ತೀರ್ಪು ನೀಡುತ್ತದೆ ಎಂದು ನಿರೀಕ್ಷಿಸಬಹುದಾಗಿದೆ.

ಇದರಂತೆ ಅನುಷ್ಠಾನಗೊಳಿಸಬಲ್ಲ ಕಾಯ್ದೆಯಾತ್ಮಕ ತಿದ್ದುಪಡಿಗಳನ್ನು ನಿರೀಕ್ಷಿಸಬಹುದಾಗಿದೆ. ಕಾಯ್ದೆಯಾತ್ಮಕ ಅಂಶಗಳ ಮಿಗಿಲಾಗಿ ಸದಸ್ಯರು ಸಂಘದಲ್ಲಿನ ತಮ್ಮ ಕರ್ತವ್ಯ ಜವಾಬ್ದಾರಿಗಳನ್ನು ಅದರ ಪ್ರಾಮುಖ್ಯತೆಯನ್ನು ಅರಿತು ನಡೆದುಕೊಳ್ಳುವರೇ ಎಂಬುದು ಸಹಕಾರ ಚಳುವಳಿ ದೃಷ್ಟಿಯಿಂದ ಅತಿಮುಖ್ಯ.

**ಚುನಾವಣೆ ಪ್ರಾಧಿಕಾರ :** ಅನುಚ್ಛೇದ 243 ZK ನ್ವಯ ಕರ್ನಾಟಕ ರಾಜ್ಯ ಸಹಕಾರ ಸಂಘಗಳ ಕಾಯ್ದೆ ಕಲಂ 39 ರನ್ವಯ ಈ ಹಿಂದೆ 'ಕರ್ನಾಟಕ ಸಹಕಾರ ಚುನಾವಣಾ ಕಮಿಷನ್' ರಚಿತವಾಗಿ ಕಮಿಷನರ್ ರವರ ನೇಮಕಾತಿ ಅಧಿಕಾರ ರಾಜ್ಯಪಾಲರಿಗೆ ಇರುವಂತೆ ಅವಕಾಶ ಕಲ್ಪಿಸಲಾಗಿತ್ತು. ಅತ್ಯಂತ ಸ್ವತಂತ್ರ ಕಾರ್ಯಾಚರಣೆಗೆ ಅವಕಾಶವಿತ್ತು. ಇದನ್ನು ತಿದ್ದುಪಡಿ ಮಾಡಿ 'ಪ್ರಾಧಿಕಾರ' (ಕಲಂ 39AA) ಮಾಡಿ 'ಕಮಿಷನರ್' ನೇಮಕಾತಿ ಅಧಿಕಾರವನ್ನು ರಾಜ್ಯ ಸರ್ಕಾರ ಪಡೆಯಿತು. ಈ ಬದಲಾವಣೆಯಿಂದಾಗಿ 'ಪ್ರಾಧಿಕಾರ' ಸರ್ಕಾರದ ಅಧೀನ ಸಂಸ್ಥೆಯಾಗಿ ಕಾರ್ಯನಿರ್ವಹಿಸುತ್ತಿರುವುದು ಗೋಚರಿಸುತ್ತಿದೆ. 97ನೇ ಸಂವಿಧಾನ ತಿದ್ದುಪಡಿಯ ಆಶಯವನ್ನು ಮೊಟಕುಗೊಳಿಸಿದಂತಾಗಿದೆ. ಮತದಾರ ಪಟ್ಟಿ ತಯಾರಿಕೆಯಿಂದ ಪದಾಧಿಕಾರಿಗಳ ಚುನಾವಣೆವರೆಗೆ ಇದರ ಜವಾಬ್ದಾರಿ ಪ್ರಾಧಿಕಾರಕ್ಕಿದೆ. ಪರ್ಯಾಯ ಚುನಾವಣೆ ವ್ಯವಸ್ಥೆ ಇಲ್ಲದಿರುವ ವ್ಯವಸ್ಥೆಯಲ್ಲಿ ಬಹುತೇಕ ಸಹಕಾರ ಇಲಾಖೆ, ಕಂದಾಯ ಇಲಾಖೆಗಳು ಪ್ರಾಧಿಕಾರದ ಅಡಿಯಲ್ಲಿ ಚುನವಣೆಗಳು ನಡೆಯುತ್ತಿವೆ. ಇದರಲ್ಲಿ ಏನಾದರೂ ಬದಲಾವಣೆಗಳನ್ನು ಆಲೋಚಿಸಬಹುದೇ ಎಂಬುದೊಂದು ಪ್ರಶ್ನೆ. ಆಡಳಿತ ಮಂಡಳಿ, ಅವಧಿ, ಸಂಖ್ಯೆ, ಮೀಸಲಾತಿ: ಅನುಚ್ಛೇದ 243 ZK, ಕರ್ನಾಟಕ ರಾಜ್ಯ ಸಹಕಾರ ಸಂಘಗಳ ಕಾಯ್ದೆ 1959 ಮತ್ತು ಕರ್ನಾಟಕ ಸೌಹಾರ್ದ ಕಾಯ್ದೆಯಲ್ಲಿ ಅಳವಡಿಸಿಕೊಳ್ಳಲಾಗಿದೆ. ಇದರಲ್ಲಿ ಬಹುತೇಕ ಅಂಶಗಳು ಕರ್ನಾಟಕ ರಾಜ್ಯ ಸಹಕಾರ ಸಂಘಗಳ ಕಾಯ್ದೆ 1959ರ 1998 ರಲ್ಲಿ ಆದ ತಿದ್ದುಪಡಿ ಅಂಶಗಳಾಗಿರುತ್ತವೆ. (ಗರಿಷ್ಟ ಸಂಖ್ಯೆ 21 ಹೊರತುಪಡಿಸಿ). ಈ ವಿಷಯಗಳು ಉಚ್ಚ ನ್ಯಾಯಾಲಯಗಳ ಪರಾಮರ್ಶೆಗೆ ಆಗಿಂದಾಗ್ಯೆ ಒಳಪಟ್ಟು ಒಂದು ರೀತಿ ಅಂತಿಮ ಸ್ವರೂಪವನ್ನು ಖಚಿತತೆಯನ್ನು ಪಡೆದಿವೆ. ಪರಾಮರ್ಶೆ ಅವಶ್ಯವೇ ಎಂದು ಮತ್ತೊಮ್ಮೆ ಆಲೋಚಿಸುವ ಅಗತ್ಯತೆ ಕಂಡು ಬರುವುದಿಲ್ಲ.

**ಆಡಳಿತ ಮಂಡಳಿ ರದ್ದತಿ ಮತ್ತು ಅಮಾನತ್ತು :**

243 ZL ನಲ್ಲಿನ ಅವಕಾಶದಂತೆ (ಕರ್ನಾಟಕ ರಾಜ್ಯ ಸಹಕಾರ ಸಂಘಗಳ ಕಾಯ್ದೆ ಕಲಂ 30) ಸರ್ಕಾರದಿಂದ ಸಹಾಯ ಪಡೆಯದ ಸಹಕಾರ ಸಂಘಗಳ ಆಡಳಿತ ಮಂಡಳಿಯನ್ನು ರದ್ಧತಿ ಮಾಡುವಂತಿಲ್ಲ, ಅಮಾನತ್ತಿನಲ್ಲಿಡುವಂತಿಲ್ಲ. ಸದಸ್ಯರ ಹಿತದೃಷ್ಠಿಯಿಂದ ತಪ್ಪೆಸಗುತ್ತಿರುವ ಆಡಳಿತ ಮಂಡಳಿಯ ಮೇಲೆ ಕ್ರಮ ತೆಗೆದುಕೊಳ್ಳುವುದು ನಿಯಂತ್ರಣ ಅಧಿಕಾರಿಗಳಿಗೆ 'ನುಂಗಲಾರದ ತುತ್ತಾಗಿ'ಗಿ ಪರಿಣಮಿಸಿತ್ತು. ಪರ್ಯಾಯವಾಗಿ ಇರುವ ಇತರೆ 'ಅವಕಾಶ'ಗಳ ಮೂಲಕ ಕ್ರಮ ತೆಗೆದುಕೊಳ್ಳಬೇಕಾದ ಪರಿಸ್ಥಿತಿ ನಿರ್ಮಾಣವಾಗಿದೆ. ಇದರ ಪರಾಮರ್ಶೆ ಅಗತ್ಯವೆಂದು ಪ್ರತಿಪಾದಿಸುವ ಅವಶ್ಯಕತೆ ಇದೆ.

**ಲೆಕ್ಕಪರಿಶೋಧನೆ :** ಅನುಚ್ಛೇದ 243 ZM ಅನ್ವಯ (ಕರ್ನಾಟಕ ರಾಜ್ಯ ಸಹಕಾರ ಸಂಘಗಳ ಕಾಯ್ದೆ ಕಲಂ 63) ಸಹಕಾರ ಸಂಘಗಳ ಲೆಕ್ಕಪರಿಶೋಧನೆ ಆಯಾ ಸಹಕಾರ ಸಂಘದ ಜವಾಬ್ದಾರಿ. ನಮ್ಮ ರಾಜ್ಯದಲ್ಲಿ ಇದರ ಉಸ್ತುವಾರಿ ಲೆಕ್ಕಪರಿಶೋಧನೆ ಇಲಾಖೆಯ ಜವಾಬ್ದಾರಿ. ರಾಜ್ಯ ಮಟ್ಟದ ಸಹಕಾರ ಸಂಸ್ಥೆಗಳ (ಉತ್ತುಂಗ ಸಂಸ್ಥೆಗಳ) ಲೆಕ್ಕಪರಿಶೋಧನಾ ವರದಿಯನ್ನು ಶಾಸನ ಸಭೆಗೆ ಮಂಡಿಸಲಾಗುತ್ತಿದೆ. ಇದು ಎಷ್ಟರಮಟ್ಟಿಗೆ ಈ ಸಂಸ್ಥೆಗಳ ಕಾರ್ಯಾಚರಣೆ ಮೇಲೆ ಪ್ರಭಾವ ಬೀರಿದೆ ಎಂಬ ಅಂಶಗಳ ಬಗ್ಗೆ ಅಧ್ಯಯನ ನಡೆಸಿ ತದನಂತರ ಪರಮಾರ್ಶೆಗೆ ಒಳಪಡಿಸುವುದು ಸೂಕ್ತ.

ಸಾಮಾನ್ಯ ಸಭೆಗಳನ್ನು ಕಡ್ಡಾಯವಾಗಿ ಕರೆಯುವಂತಹ ವಾತಾವರಣ ನಿರ್ಮಾಣ ಆಗಿದೆ (ಅನುಚ್ಛೇದ 243 ZN ಕರ್ನಾಟಕ ರಾಜ್ಯ ಸಹಕಾರ ಸಂಘಗಳ ಕಾಯ್ದೆ ಕಲಂ 27). ಸದಸ್ಯ ತನಗೆ ಸಂಬಂಧಿಸಿದಂತೆ ಇರುವ ವಿಷಯಗಳನ್ನು ತಿಳಿಯುವ ಮಾಹಿತಿ ಹಕ್ಕು (ಅ. 243 ZO ಕ.ರಾ.ಸ.ಸಂ. ಕಾಯ್ದೆ ಕಲಂ 19ಎ), ನಿಬಂಧಕರಿಗೆ ವಿದ್ಯುಕ್ತ ಸಲ್ಲಿಕೆಗಳು (ಅ. 243, ಕ.ರಾ.ಸ.ಸಂ.ಕಲಂ 27ಬಿ) ಸಹಕಾರ ಸಂಘಗಳ ವ್ಯವಸ್ಥಾಪನೆಯಲ್ಲಿ ಉತ್ತಮ ರೂಢಿಕೆಗಳನ್ನು ರೂಪಿಸಿವೆ. ಪರಮಾರ್ಶೆಗೆ ಒಳಪಡಿಸುವ ಅವಶ್ಯಕತೆ ಕಂಡುಬರುವುದಿಲ್ಲ. ಅದೇ ರೀತಿಯಲ್ಲಿ ಅಪರಾಧಗಳು ಮತ್ತು ದಂಡನೆಗಳು (ಅ. 243 ZQ – ಕ.ರಾ.ಸ.ಸಂ.ಕಲಂ 109).

ಭಾರತದ ಒಕ್ಕೂಟ (ಕೇಂದ್ರ) ಸರ್ಕಾರವು ನೂತನವಾಗಿ ಸಹಕಾರ ಸಚಿವಾಲಯ ರಚಿಸಿರುವ ಈ ಸಂದರ್ಭದಲ್ಲಿಯೇ ಮಾನ್ಯ ಸರ್ವೋಚ್ಛ ನ್ಯಾಯಾಲಯದ ಈ ತೀರ್ಪು ಪ್ರಕಟವಾಗಿರುವುದು ಕಾಕತಾಳಿಯವೆ ಆಗಿದೆ. ಸಹಕಾರಿಗಳು 'ಸಹಕಾರ'ವನ್ನು ನಿಯಂತ್ರಿಸುವುದು ರಾಜ್ಯವೇ, ಒಕ್ಕೂಟ ಸರ್ಕಾರ (ಕೇಂದ್ರ)ವೇ ಎಂದು ಆಲೋಚಿಸುವ ಬದಲಾಗಿ ಅವರ ಮುಂದಿರುವ ಸವಾಲು ಬೇರೆಯದೇ ಆಗಿದೆ. ಅದು, ಈ ಆಧುನಿಕ ದಿನಮಾನಗಳ ಅಗತ್ಯತೆಯಂತೆ ನಾಗಾಲೋಟದಿಂದ ಸಾಗಿರುವ ಮಾಹಿತಿ ತಂತ್ರಜ್ಞಾನ ವ್ಯವಸ್ಥೆ, ಕೃತಕ ಬುದ್ಧಿಮತ್ತೆ (Artificial intelligence AI) ಇಂಟರ್‌ನೆಟ್, ಇದರಿಂದ ಸೃಷ್ಠಿಯಾಗಿರುವ ಪರಿಸರದಲ್ಲಿ 'ಸಹಕಾರ' ಎಷ್ಟರಮಟ್ಟಿಗೆ ಪ್ರಸ್ತುತವಾಗಿದೆ. ಯಾವ ಯಾವ ವಲಯದಲ್ಲಿ ಹೇಗೆ ಯುವಜನತೆಯನ್ನು ಒಳಗೊಂಡು ಒಟ್ಟಾರೆ ಆರ್ಥಿಕತೆಯ ಪಾಲಿನಲ್ಲಿ 'ಸಹಕಾರ'ವು ವೃದ್ಧಿಗೊಂಡು ತನ್ನ ಛಾಪು ಮೂಡಿಸುತ್ತದೆ.

ಪ್ರಬುದ್ಧಮಾನಕ್ಕೆ ಬಂಡವಾಳಶಾಹಿ (ಖಾಸಗಿ) ವಲಯವು ಏರುಗತಿಯಲ್ಲಿದ್ದು, ಸಾರ್ವಜನಿಕ ವಲಯವೂ ಖಾಸಗೀಕರಣಕ್ಕೆ ಒಳಗಾಗುತ್ತಿರುವ ಈ ಸಂದರ್ಭದಲ್ಲಿ ಸಹಕಾರ ವಲಯವೂ ಬಂಡವಾಳಶಾಹಿಯೊಡನೆ ಸಂಯೋಜಿಸಿ, ಸಹಯೋಗದೊಡನೆ ತನ್ನ ಕ್ಷೇತ್ರವನ್ನು ವಿಸ್ತರಿಸಿಕೊಳ್ಳಲು ವಿಫುಲ ಅವಕಾಶಗಳಿವೆ. ಅವುಗಳನ್ನು ಹೇಗೆ ಉಪಯೋಗಿಸಿಕೊಂಡು ತಾನೂ ಬೆಳೆಯಬಲ್ಲದು ಎಂಬುದರ ವಿಶ್ಲೇಷಣೆ ಈಗಿನ ಅಗತ್ಯತೆ. ಬಡವ ಬಲ್ಲಿದನ ಅಂತರವನ್ನು 'ಸಹಕಾರ'ವು ಹೇಗೆ ಕುಗ್ಗಿಸಬಲ್ಲದು ಎಂಬುದೇ ಈಗಿನ ಯಕ್ಷ ಪ್ರಶ್ನೆ. ದೊರಕಿರುವ 'ಸ್ವಾತಂತ್ರ್ಯ'ವನ್ನು ಸದುಪಯೋಗಪಡಿಸಿ 'ಸಹಕಾರದಿಂದ ಸಮೃದ್ಧಿ'ಯನ್ನು ಸಾಧಿಸಲಾಗುತ್ತದೆ ಎಂದು ಆಶಿಸೋಣ.

# ಸಹಕಾರ ಮಾರ್ಗದರ್ಶಿ : ಆಧುನಿಕ ಸಹಕಾರ ಚಳುವಳಿಯ ಉಗಮ

ಲೇಖನ : ಕರ್ನಾಟಕ ಪ್ರಗತಿಪರ ಸಹಕಾರಿಗಳ ವೇದಿಕೆ (ರಿ.) ಬೆಂಗಳೂರು.
ಬಸವೇಗೌಡ, ನಿವೃತ್ತ ಅಪರ ನಿಬಂಧಕರು ಹಾಗೂ ಅಧ್ಯಕ್ಷರು

**ರಸ ಗೊಬ್ಬರವನ್ನು 76.000 ಚಿಲ್ಲರೆ ಮಾರಾಟಗಾರರು 40 ಲಕ್ಷ ಟನ್‌ಗಳನ್ನು 1989–90ರಲ್ಲಿ ವಿತರಿಸಿದರು. ಹಾಗೆಯೇ NAFED ಬೆಂಬಲ ಬೆಲೆ ಯೋಜನೆಯನ್ವಯ ರಾಷ್ಟ್ರೀಯ ಆದ್ಯತೆಗಳಾದ ಎಣ್ಣೇ ಬೀಜ, ಒರಟು ಧಾನ್ಯ, ಬೇಳೆಕಾಳು, ಆಲೂಗಡ್ಡೆ ಮತ್ತು ಈರುಳ್ಳಿಯನ್ನು ಕೊಂಡುಕೊಳ್ಳುವದರ ಜೊತೆಗೆ 3,60,220 ಟನ್ನಗಳಷ್ಟು ರಫ್ತು ಮಾಡಿ ದೇಶದ ಮಾರುಕಟ್ಟೆಯಲ್ಲಿ ಬೆಲೆ ಸ್ಥಿರವಾಗಲು ಶ್ರಮಿಸಿತು. ಅಲ್ಲದೆ ಸಹಕಾರ ಉಗ್ರಾಣ ಮತ್ತು ವೇರ್‌ಹೌಸ್‌ಗಳು ಸಂಗ್ರಹಣಾ ಸಾಮಾರ್ಥ್ಯವನ್ನು 1984–85 ರಲ್ಲಿದ್ದಂತೆ 80 ಲಕ್ಷ ಟನ್‌ಗಳಿಂದ 1990–91ರಲ್ಲಿ 141 ಲಕ್ಷ ಟನ್‌ಗೆ ಹೆಚ್ಚಿಸಲಾಯಿತು.**

... ಹಿಂದಿನ ಸಂಚಿಕೆಯಿಂದ

**ಆರನೇ ಪಂಚವಾರ್ಷಿಕ ಯೋಜನೆ (1980–85) :** ಆರನೇ ಪಂಚವಾರ್ಷಿಕ ಯೋಜನೆಯಲ್ಲಿ ಪ್ರಮುಖವಾಗಿ ಈ ಕೆಳಕಂಡ ಕಾರ್ಯಗಳ ಬಗ್ಗೆ ವಿಶೇಷ ಗಮನ ನೀಡಲು ಉದ್ದೇಶಿಸಲಾಗಿರುತ್ತದೆ. 1) ಗ್ರಾಮ ಮಟ್ಟದ ಸಂಘಗಳು ಸದಸ್ಯರ ಭಿನ್ನ ಅಗತ್ಯತೆಗಳನ್ನು ಪೂರೈಸಲು ವಿವಿದೋದ್ದೇಶ ಘಟಕಗಳಾಗಿ ಪರಿಣಾಮಕಾರಿಯಾಗಿ ಕಾರ್ಯನಿರ್ವಹಿಸಲು ಯೋಜನೆಗಳನ್ನು ರೂಪಿಸಿ ಅನುಷ್ಠಾನ ಗೊಳಿಸುವುದು, 2) ಹಾಲಿ ಇರುವ ಸಹಕಾರ ಕಾರ್ಯ ನೀತಿ ಮತ್ತು ವಿಧಾನಗಳನ್ನು ಪುನರ್ ಪರಿಶೀಲಿಸಿ ಗ್ರಾಮೀಣ ಬಡ ಜನರ ಆರ್ಥಿಕ ಪರಿಸ್ಥಿತಿಯ ಸುಧಾರಣೆಗೆ ವ್ಯವಸ್ಥಿತವಾಗಿ ರೂಪಿಸುವುದು, 3) ವಿಸ್ತರಣೆಗೊಳ್ಳುತ್ತಿರುವ ಕೃಷಿ ಹಾಗೂ ತೋಟಗಾರಿಕೆ, ಡೇರೆ, ಹೈನುಗಾರಿಕೆ, ಆಹಾರ ಸಂಸ್ಕರಣಾ, ಕೋಳಿ ಸಾಕಾಣಿಕೆ, ರೇಷ್ಮೆ, ಮೀನುಗಾರಿಕೆ, ಇತ್ಯಾದಿ ಎಲ್ಲಾ ಕ್ಷೇತ್ರಗಳನ್ನು ಒಳಗೊಂಡ ಅಗತ್ಯತೆಗಳನ್ನು ಪೂರೈಸಲು ಸಹಕಾರ ಮಹಾ ಮಂಡಳಗಳನ್ನು ಬಲಗೊಳಿಸುವುದು, 4) ಸಹಕಾರ ಸಂಸ್ಥೆಗಳ ವ್ಯವಸ್ಥಾಪನೆಯಲ್ಲಿ ವೃತ್ತಿ ಪರತೆಯನ್ನು ಅಭಿವೃದ್ಧಿಗೊಳಿಸುವುದು.

ಮಹಾಮಂಡಳಗಳು ತಮ್ಮ ಕ್ಷೇತ್ರ ಸಂಸ್ಥೆಗಳ ಸುಧಾರಣೆಗೆ ಕ್ರಮವಿಟ್ಟು ಅಂತರ್‌ರಾಜ್ಯ ಮತ್ತು ಅಂತರ್‌ರಾಷ್ಟ್ರೀಯ ವ್ಯಾಪಾರ ಕೈಗೊಳ್ಳುವಂತೆ ಉತ್ತೇಜಿಸುವುದು ಈ ಯೋಜನೆಯ ಗುರಿಯಾಗಿರುತ್ತದೆ. ಅಲ್ಲದೆ ಗ್ರಾಮೀಣ ಸಹಕಾರದ ಸುಧಾರಣೆಗೆ ಸಂಬಂಧಿಸಿದಂತೆ ಸಂಶೋಧನೆಗೆ ಉತ್ತೇಜನ, ನಗರ ಮತ್ತು ಗ್ರಾಮೀಣ ಪ್ರದೇಶಗಳಲ್ಲಿ ಗ್ರಾಹಕ ವಸ್ತುಗಳ ಹಾಗೂ ಸಾರ್ವಜನಿಕ ವಿತರಣಾ ವ್ಯವಸ್ಥೆಯನ್ನು ಬಲಪಡಿಸಲು ಗ್ರಾಹಕ ಕ್ಷೇತ್ರಕ್ಕೆ ಉತ್ತೇಜನ ಇತ್ಯಾದಿ ಸೇರಿರುತ್ತದೆ. ಕೃಷಿ, ಗ್ರಾಹಕ ಮತ್ತು ವೃತ್ತಿಪರತೆ, ಸಂಶೋಧನೆ ಇತ್ಯಾದಿ ಹೆಚ್ಚಿನ ಆದ್ಯತೆ ಪಡೆದುಕೊಂಡಿರುತ್ತವೆ.

ಈ ಯೋಜನೆಯ ಅವಧಿಯಲ್ಲಿ ಸಹಕಾರ ಕ್ಷೇತ್ರದ ವಿವಿಧ ಯೋಜನೆಗಳಿಗೆ ಎಲ್ಲಾ ವಲಯವು ಸೇರಿದಂತೆ ರೂ.914.23 ಕೋಟಿಗಳನ್ನು ಮೀಸಲಾಗಿ ಇಡಲಾಗಿತ್ತು.

**ಏಳನೇ ಪಂಚವಾರ್ಷಿಕ ಯೋಜನೆ (1985–90) :** ಏಳನೇಯ ಪಂಚವಾರ್ಷಿಕ ಯೋಜನೆಯ ತಂತ್ರಗಾರಿಕೆಯು ಹಿಂದಿನ ಯೋಜನೆಯಂತಯೇ ಗ್ರಾಮೀಣ ಪ್ರದೇಶಗಳ ಸಹಕಾರ ಸಂಘಗಳನ್ನು ಅಭಿವೃದ್ಧಿಪಡಿಸುವ ಗುರಿಯನ್ನು ಮುಂದುವರೆಸಲಾಯಿತು. ಅಲ್ಲದೆ ಸಹಕಾರ ಕ್ಷೇತ್ರದಲ್ಲಿ ಹಿಂದುಳಿದ ರಾಜ್ಯಗಳಿಗೆ ವಿಶೇಷ ಕಾರ್ಯಕ್ರಮ, ಸಾರ್ವಜನಿಕ ವಿತರಣಾ ಪದ್ಧತಿಯ ಅನುಷ್ಠಾನದ ಮೂಲಕ ಗ್ರಾಹಕರ ಸಹಕಾರಕ್ಕೆ ಬೆಂಬಲ ನೀಡಲಾಯಿತು. ರಾಷ್ಟ್ರೀಯ ಕೃಷಿ ಮಾರಾಟ ಮಹಾಮಂಡಳಿಯು (NAFED) 7ನೇ ಪಂಚವಾರ್ಷಿಕ ಯೋಜನೆಯಲ್ಲಿ ಕೆಲವು ವಸ್ತುಗಳನ್ನು ಬೆಂಬಲ ಬೆಲೆ ಯೋಜನೆಯಡಿ ಕೊಂಡುಕೊಳ್ಳಲು ಕೇಂದ್ರ ಏಜೆಂಟರನ್ನಾಗಿ ನೇಮಿಸಲಾಯಿತು. ಈ ಯೋಜನೆಯಡಿ ಎಣ್ಣೆಕಾಳು ಬೀಜಗಳು, ಬೆಳೆ ಕಾಳುಗಳು ಮತ್ತು ಒರಟು ಧಾನ್ಯಗಳನ್ನು ಬೆಂಬಲ ಬೆಲೆ ಯೋಜನೆಯಡಿ ಕೇಂದ್ರ ಸರ್ಕಾರದ ನೋಡೆಲ್ ಏಜೆನ್ಸಿಯಾಗಿ ಮಹತ್ವದ ಪಾತ್ರ ವಹಿಸಿತು. ಈ ಯೋಜನೆಯ ಅವಧಿಯಲ್ಲಿ ಸಹಕಾರ ಕ್ಷೇತ್ರದಲ್ಲಿ ಹೆಚ್ಚುವರಿ ಸಂಗ್ರಹಣಾ ಸಾಮರ್ಥ್ಯವನ್ನು 20 ಲಕ್ಷ ಟನ್‌ಗಳಿಂದ 100 ಲಕ್ಷ ಟನ್‌ಗಳಿಗೆ ಹೆಚ್ಚಿಸಲಾಯಿತು. ಸಹಕಾರ ಕ್ಷೇತ್ರವು ದುರ್ಬಲ ವರ್ಗದವರಿಗೆ ಹಾಗೂ ಪರಿಶಿಷ್ಟ ಜಾತಿ ಮತ್ತು ಪರಿಶೀಷ್ಟ ಪಂಗಡದ ಅಭಿವೃದ್ಧಿಗೆ ನೆರವು ನೀಡಿತು. ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಗಳು ರೈತ ಕುಟುಂಬದ ಎಲ್ಲಾ ಅವಶ್ಯಕತೆಗಳಾದ ಸಾಲ, ಬ್ಯಾಂಕಿಂಗ್, ಹುಟ್ಟುವಳಿ ಸರಬರಾಜು, ಮಾರುಕಟ್ಟೆ ವ್ಯವಸ್ಥೆ ಮುಂತಾದವುಗಳನ್ನು ಯೋಜನೆಯ ಆಧಾರದ ಮೇಲೆ ಜಾರಿಗೆ ತರುವ ಸಂಸ್ಥೆಯಾಗಿ ಅಭಿವೃದ್ಧಿಪಡಿಸಲಾಯಿತು. ಆದರೆ ಸಹಕಾರ ಕ್ಷೇತ್ರವು ದೇಶದ ಎಲ್ಲಾ ಭಾಗಗಳಲ್ಲಿ ಒಂದೇ ತೆರನಾದ ಬೆಳವಣಿಗೆ ಕಾಣಲಿಲ್ಲ.

**ಎಂಟನೇ ಪಂಚವಾರ್ಷಿಕ ಯೋಜನೆ (1992–97) :** ಸಹಕಾರ ಚಳುವವಳಿ ಸ್ವಾಲಂಬಿಯಾಗಿ ಬೆಳೆಯುವ ತಂತ್ರಗಾರಿಕೆಯನ್ನು ಎಂಟನೇ ಪಂಚವಾರ್ಷಿಕ ಯೋಜನೆಯಲ್ಲಿ ಹಮ್ಮಿಕೊಳ್ಳಲಾಯಿತು. ಸಹಕಾರ ವ್ಯವಸ್ಥೆಯು ಸಣ್ಣ ಮತ್ತು ಅತಿ ಸಣ್ಣ ರೈತರ ದಾನ್ಯವನ್ನು ಸಂಗ್ರಹಿಸುವ ಕೃಷಿ ಉತ್ಪನ್ನಗಳಿಗೆ ಮಾರುಕಟ್ಟೆ ವ್ಯವಸ್ಥೆ, ಸಂಸ್ಕರಣೆ, ಸಂಗ್ರಹಣೆ ಕಾರ್ಯವನ್ನು ಅನುಷ್ಠಾನಕ್ಕೆ ತರಲಾಯಿತು.

ರಸ ಗೊಬ್ಬರವನ್ನು 76.000 ಚಿಲ್ಲರೆ ಮಾರಾಟಗಾರರು 40 ಲಕ್ಷ ಟನ್‌ಗಳನ್ನು 1989–90ರಲ್ಲಿ ವಿತರಿಸಿದರು. ಹಾಗೆಯೇ NAFED ಬೆಂಬಲ ಬೆಲೆ ಯೋಜನೆಯನ್ವಯ ರಾಷ್ಟ್ರೀಯ ಆದ್ಯತೆಗಳಾದ ಎಣ್ಣೇ ಬೀಜ, ಒರಟು ಧಾನ್ಯ, ಬೇಳೆಕಾಳು, ಆಲೂಗಡ್ಡೆ ಮತ್ತು ಈರುಳ್ಳಿಯನ್ನು

## "ಕೋವಿಡ್ ಸಮಯದಲ್ಲಿ ಕಳೆದುಹೋದ ಬೇಕು-ಬೇಡವಾದ ಸಂಪ್ರದಾಯ/ನಿಯಮಗಳು"



ಅವರವರ ಜನಾಂಗದ ಸಂಪ್ರದಾಯದಂತೆ ಯಾವುದೇ ಕುಟುಂಬದಲ್ಲಿ ಮಗು ಜನಿಸಿದ ನಿರ್ದಿಷ್ಠ ದಿನಾಂಕದೊಳಗೆ ಪುರೋಹಿತರ ನಿರ್ದೇಶನದಂತೆ ನಡೆಯುತ್ತಿದ್ದ ಪೂಜೆ, ಹವನ, ಹೋಮ ಮತ್ತು ಸೂತಕ ನಿವಾರಣೆ, ಆ ಸಮಯದಲ್ಲಿನ ದಾನ, ಧರ್ಮ ಎಲ್ಲಿಗೆ ಹೋಯಿತು? ಗೃಹ ಪ್ರವೇಶ, ಮುಂಜಿ, ಮದುವೆ, ಬೀಗರ ಔತಣ, ವಿವಾಹ ವಾರ್ಷಿಕೋತ್ಸವ, ಜನ್ಮ ದಿನಾಚರಣೆ, ಷಷ್ಠಿ ಪೂರ್ತಿ ಸಂಪ್ರದಾಯವಾಗಿರದೆ ತೋರಿಕೆ, ಆಡಂಬರ, ಪ್ರತಿಷ್ಠೆಯಾಗಿ ಆಚರಿಸಲ್ಪಡುತ್ತಿದ್ದವಲ್ಲವೇ? ಈಗ ಎಲ್ಲಿಗೆ ಹೋಯಿತು? ಅಷ್ಟೇ ಅಲ್ಲದೆ, ಶವ ಸಂಸ್ಕಾರ ಕೂಡ ಆಡಂಬರವಾಗಿತ್ತು ಎಂದು ಈಗ ಅನ್ನಿಸುತ್ತಿಲ್ಲವೇ? ತಿಥಿ ಕಾರ್ಯದಲ್ಲೂ ಕೂಡ ಸಸ್ಯಾಹಾರ / ಮಾಂಸಾಹಾರ ಭಕ್ಷ್ಯ ಭೋಜನಗಳಿದ್ದವು. ಶಾಸನ ವಿಧಿಸಿದ ಎಚ್ಚರಿಕೆಯಂತೆ ಶವಸಂಸ್ಕಾರ ಮತ್ತು ತಿಥಿ ಕಾರ್ಯಕ್ಕೆ ಬಂಧುಗಳಿಗಾಗಿ ಕಾಯುತ್ತಿದ್ದುದು, ಅವರುಗಳು ಬರದಿದ್ದಲ್ಲಿ / ದೋಷ ನಿವಾರಣೆ ಆಗದಿದ್ದಲ್ಲಿ / ಇಂತಹ ಸಮಯದಲ್ಲೇ ಶವಸಂಸ್ಕಾರ ನೆರವೇರಿಸಬೇಕೆಂಬ ನಿಯಮಗಳು ಈಗೆಲ್ಲಿ? ದೋಷ ನಿವಾರಣೆಯಾಗದಿದ್ದಲ್ಲಿ ಸ್ವರ್ಗವಾಸಿಗಳಾಗುವುದಿಲ್ಲ ಎಂಬ ನಿಯಮ ಈಗೆಲ್ಲಿ?

ಜನನದಿಂದ ಮರಣದವರೆಗೆ (ತಲೆ ತಲೆಮಾರುಗಳಿಂದ) ಇತಿ ಮಿತಿಯಲ್ಲಿದ್ದ ಸಂಪ್ರದಾಯಗಳು ಇತ್ತೀಚಿನ ದಿನಗಳಲ್ಲಿ ಎಲ್ಲ ಆಚರಣೆಗಳು ಪ್ರತಿಷ್ಠೆಯ ಕಾರ್ಯ ವಾಗಿದ್ದವೇ ವಿನಃ ನಿಜವಾಗಿಯೂ ಶಾಸ್ತ್ರ / ಸಂಪ್ರದಾಯವಾಗಿ ಉಳಿದಿರಲಿಲ್ಲ. ಬಲವಂತಕ್ಕೋ, ಸಮಾದಾನಕ್ಕೋ, ಇತರರನ್ನು ಮೆಚ್ಚಿಸಲೋ ಅಥವಾ ಆಡಂಬರ ಪ್ರದರ್ಶಿಸಲೋ ಎಂಬಂತಿತ್ತು. ಇವೆಲ್ಲವನ್ನು 'ಕೊರೋನ' ಕಿತ್ತು ಹಾಕಿತಾ?

ಒಂದನೇ(1) ಮತ್ತು ಎರಡನೇ(2) ಕೊರೋನ ಅಲೆಯಲ್ಲಿನ ಅವಧಿಯಲ್ಲಿ ಶಾಸ್ತ್ರ ಸಂಪ್ರದಾಯಗಳಿಲ್ಲದ / ವಿಧಿ ವಿಧಾನಗಳಿಲ್ಲದೆ ಜರುಗಿದ ಕಾರ್ಯಗಳಿಗೆ ಶಾಂತಿ ಯಾವಾಗ? ಅಥವಾ 2020 ಮತ್ತು 2021 ರಲ್ಲಿ ಪಾಲಿಸದ ನಿಯಮಗಳಿಗೆ ಮುಂದೊಂದು ದಿನ ಶಾಂತಿ ಮಾಡಿಸುವ ದಿನಗಳು ಬರಬಹುದು ಎಂದು ಕಾಯುತ್ತಿರುವುದೋ ಅಥವಾ ಮಾನಸಿಕ ಧೈರ್ಯದಿಂದ ಸುಮ್ಮನಿರುವುದೋ?

**▸▸ ಎಚ್.ಟಿ. ನಾಗೇಶ್, ನಿರ್ದೇಶಕರು,**

**ಕರ್ನಾಟಕ ರಾಜ್ಯ ಸಹಕಾರ ಪತ್ತಿನ ಸಂಘಗಳ ಮಹಾಮಂಡಳ, ಬೆಂಗಳೂರು.**

ಕೊಂಡುಕೊಳ್ಳುವದರ ಜೊತೆಗೆ 3,60,220 ಟನ್ನಗಳಷ್ಟು ರಫ್ತು ಮಾಡಿ ದೇಶದ ಮಾರುಕಟ್ಟೆಯಲ್ಲಿ ಬೆಲೆ ಸ್ಥಿರವಾಗಲು ಶ್ರಮಿಸಿತು. ಅಲ್ಲದೆ ಸಹಕಾರ ಉಗ್ರಾಣ ಮತ್ತು ವೇರ್‌ಹೌಸ್‌ಗಳು ಸಂಗ್ರಹಣಾ ಸಾಮಾರ್ಥ್ಯವನ್ನು 1984–85ರಲ್ಲಿದ್ದಂತೆ 80 ಲಕ್ಷ ಟನ್‌ಗಳಿಂದ 1990–91ರಲ್ಲಿ 141 ಲಕ್ಷ ಟನ್‌ಗೆ ಹೆಚ್ಚಿಸಲಾಯಿತು. ಉಗ್ರಾಣ ಮತ್ತು ಸಂಗ್ರಹಣೆ ವ್ಯವಸ್ಥೆ ಹಾಗೂ ಸಂಸ್ಕರಣೆ ಅಭಿವೃದ್ಧಿ ಹೊಂದುವುದರಲ್ಲಿ ಸಹಕಾರ ಕ್ಷೇತ್ರವು ಶ್ರಮವಹಿಸಿತು.

**ಒಂಭತ್ತನೇಯ ಪಂಚವಾರ್ಷಿಕ ಯೋಜನೆ (1997–2002) :** ಒಂಬತ್ತನೆಯ ಪಂಚವಾರ್ಷಿಕ ಯೋಜನೆಯು 1996–97ರಿಂದ ಪ್ರಾರಂಭಗೊಂಡಿತು. ಹೆಚ್ಚುವರಿ ಅನುದಾನವನ್ನು ಏಳು ಕನಿಷ್ಠ ಮೂಲಭೂತ ಸೇವೆಗಳಿಗೆ ಸಹಕಾರ ಕ್ಷೇತ್ರದ ಮೂಲಕ ನೀಡಲಾಯಿತು. ಕಾರ್ಮಿಕ ಸಹಕಾರ ಸಂಘಗಳ ರಾಷ್ಟ್ರೀಯ ಫೆಡರೇಷನ್ ಬಂಡವಾಳ ಅಭಿವೃದ್ಧಿ ಸೆಲ್ ಮತ್ತು ಗ್ರಾಮೀಣ ಕೆಲಸಗಾರರ ಸೆಲ್ ಬಲಪಡಿಸಲು ಸಲಹೆ ನೀಡಿತು. ಈ ಅವಧಿಯಲ್ಲಿ ನಡೆಯಿಸಿದ ಮೌಲ್ಯಮಾಪನದ ಪ್ರಕಾರ ಸಹಕಾರದ ಧಾನ್ಯ ಸಂಗ್ರಹಣೆಯು ಸುಮಾರು 42.25 ಮಿಲಿಯನ್ ಟನ್ನುಗಳಷ್ಟಿದ್ದು ಅವಶ್ಯಕ ಧಾನ್ಯ ಸಂಗ್ರಹಣೆಯು 24.30 ಮಿಲಿಯನ್ ಟನ್ನುಗಳ ರಷ್ಟಾಗಿರುತ್ತದೆ. ದೇಶದಲ್ಲಿ ದೊಡ್ಡ ಪ್ರಮಾಣದ ಹಾಲು ಉತ್ಪಾದನೆಯಾಗುತ್ತಿದ್ದು (74.7 ಮಿಲಿಯನ್ ಟನ್) ಇದಕ್ಕೆ ಹಾಲು ಉತ್ಪಾದಕ ಸಹಕಾರ ಸಂಘಗಳಿಗೆ ಪ್ರೋತ್ಸಾಹ ನೀಡಿರುವುದೇ ಕಾರಣವಾಗಿದೆ. ಅಲ್ಲದೆ ಗೋಧಿ, ಅಕ್ಕಿ, ಮತ್ತು ಹಣ್ಣುಗಳ ಉತ್ಪಾದನಾ ಅಭಿವೃದ್ಧಿಗೆ ಹೆಚ್ಚಿನ ಪ್ರಾಮುಖ್ಯತೆಯನ್ನು ನೀಡಲಾಗಿದೆ.

ಮುಂದುವರೆಯುವುದು...

# ಸ್ಪರ್ಧಾತ್ಮಕ ಸಹಕಾರಿ ಪ್ರಶ್ನೋತ್ತರಗಳು – ಓದಿ ಉತ್ತರಿಸಿ

**1. ಸಹಕಾರ ಸಂಘದ ಸಿಬ್ಬಂದಿ ನೇಮಕಾತಿ ಸಮಿತಿ ಅಧ್ಯಕ್ಷರಾಗಿರುವವರು ......................................**

ಎ) ನಿಬಂಧಕರು ಅಥವಾ ಅವರ ನಾಮಿನಿ

ಬಿ) ಸಂಘದ ಉಪಾಧ್ಯಕ್ಷರು

ಸಿ) ಸಂಘದ ಅಧ್ಯಕ್ಷರು

ಡಿ) ಸಂಘದ ಮುಖ್ಯ ಕಾರ್ಯನಿರ್ವಾಹಕರು

**2. ಸಹಕಾರ ಸಂಘದಲ್ಲಿ ಅಧಿಕಾರಿ /ನೌಕರರ ನಿವೃತ್ತಿ ವಯಸ್ಸು ...........**

ಎ) 58 ವರ್ಷಗಳು

ಬಿ) 55 ವರ್ಷಗಳು

ಸಿ) 60 ವರ್ಷಗಳು

ಡಿ) 62 ವರ್ಷಗಳು

**3. ಸಹಕಾರ ಸಂಘವನ್ನು ಸಮಾಪನೆ ಗೊಳಿಸುವ ಸಂದರ್ಭ ..........**

ಎ) ಸಂಘದ ಸದಸ್ಯರ ಸಂಖ್ಯೆ 10ಕ್ಕೀಂತ ಕಡಿಮೆ ಇದ್ದಲ್ಲಿ

ಬಿ) 3/4 ಭಾಗಕ್ಕಿಂತ ಕಡಿಮೆ ಇಲ್ಲದಷ್ಟು ಸದಸ್ಯರು ಒಪ್ಪಿಗೆ ಸೂಚಿಸಿದ್ದಲ್ಲಿ

ಸಿ) ಸಂಘವು ನೊಂದಣಿ ದಿನಾಂಕದಿಂದ ಆರು ತಿಂಗಳೊಳಗೆ ಕಾರ್ಯ ಪ್ರಾರಂಭಿಸದಿರುವಲ್ಲಿ ಅಥವಾ
ಆರು ತಿಂಗಳ ವರೆಗೆ ಕಾರ್ಯವನ್ನು ನಿಲ್ಲಿಸಿರುವಲ್ಲಿ

ಡಿ) ಮೇಲಿನ ಎಲ್ಲವು

**4. ಸಹಕಾರ ಸಂಘಗಳ ಕಾಯ್ದೆ 1959ರಡಿಯಲ್ಲಿ ಸಮಾಪನಾಧಿಕಾರಿಯನ್ನು ನೇಮಕ ಮಾಡುವವರು ಹಾಗೂ ಯಾವ ಕಲಂನ ಅಡಿಯಲ್ಲಿ**

ಎ) ಸರ್ಕಾರ, ಕಲಂ 108ರಡಿ

ಬಿ) ಮಹಾಸಭೆ ಕಲಂ 27ರಡಿ

ಸಿ) ನಿಬಂಧಕರು ಕಲಂ 73ರಡಿ

ಡಿ) ಯಾವುದು ಅಲ್ಲ

**5. ಸಹಕಾರ ಪತ್ತಿನ ವ್ಯವಸ್ಥೆಗೆ ಅನ್ವಯವಾಗುವ ವಿಶೇಷ ಉಪಬಂಧಗಳು ................................. ಅಧ್ಯಾಯದಲ್ಲಿದೆ.**

ಎ) ಅಧ್ಯಾಯ – X

ಬಿ) ಅಧ್ಯಾಯ – IX

ಸಿ) ಅಧ್ಯಾಯ – XI-A

ಡಿ) ಅಧ್ಯಾಯ – XII-A

**6. ಸಹಕಾರ ಪತ್ತಿನ ವ್ಯವಸ್ಥೆಯಲ್ಲಿನ ಸಂಘದ ಷೇರು ಬಂಡವಾಳಕ್ಕೆ ಸರ್ಕಾರದ ಷೇರುವಂತಿಗೆ ಮೊತ್ತ ಶೇ..............ರಷ್ಟು ಮೀರತಕ್ಕದ್ದಲ್ಲ.**

ಎ) ಶೇ. 40

ಬಿ) ಶೇ. 50

ಸಿ) ಶೇ.25

ಡಿ) ಶೇ.75

**7. ಸಮಾಪನಾ ಸಹಕಾರ ಸಂಘದಲ್ಲಿ ಆಸ್ತಿ ಮತ್ತು ಜವಾಬ್ದಾರಿಯನ್ನು ಇತ್ಯರ್ಥ ಪಡಿಸುವ ವ್ಯಕ್ತಿ ..............................**

ಎ) ನಿಬಂಧಕರು

ಬಿ) ವಿಚಾರಣಾಧಿಕಾರಿ

ಸಿ) ಸಮಾಪನಾಧಿಕಾರಿ

ಡಿ) ಮೇಲಿನ ಯಾರು ಅಲ್ಲ

**8. ಸಹಕಾರ ಪತ್ತಿನ ವ್ಯವಸ್ಥೆಯಲ್ಲಿನ ಸಹಕಾರ ಸಂಘದ ಆಡಳಿತ ಮಂಡಳಿಯನ್ನು ರದ್ದುಗೊಳಿಸಿದ ಎಷ್ಟು ತಿಂಗಳೊಳಗಾಗಿ ಚುನಾವಣೆ ನಡೆಸಬೇಕಾಗಿದೆ.**

ಎ) ಒಂದು ವರ್ಷ

ಬಿ) ಮೂರು ತಿಂಗಳು

ಸಿ) ಎರಡು ತಿಂಗಳು

ಡಿ) ಐದು ತಿಂಗಳು

**9. ಸಹಕಾರ ಸಂಘದ ಕಾಯ್ದೆಯು ಆದೇಶ ಪೂರ್ವ ವ್ಯಕ್ತಿಗೆ ಅವಕಾಶ ಕಲ್ಪಿಸಿರುವ ಕಲಂ**

ಎ) ಕಲಂ 101

ಬಿ) ಕಲಂ 101ಎ

ಸಿ) ಕಲಂ 103

ಡಿ) ಕಲಂ 101ಬಿ

**10. ಸಂಘದ ಆಡಳಿತ ಮಂಡಳಿ ಸದಸ್ಯತ್ವ ಅರ್ಜಿ ತಿರಸ್ಕರಿಸಿದ್ದಲ್ಲಿ ಮೇಲ್ಮನವಿಗೆ ಕಾಯ್ದೆಯಲ್ಲಿ ಅವಕಾಶ ಕಲ್ಪಿಸಿರುವ ಕಲಂ ................**

ಎ) ಕಲಂ 104

ಬಿ) ಕಲಂ 105

ಸಿ) ಕಲಂ 105ಎ

ಡಿ) ಕಲಂ 106

**ಹಿಂದಿನ ಸಂಚಿಕೆಯ ಪ್ರಶ್ನೆಗಳಿಗೆ ಉತ್ತರಗಳು :**

**1 - B, 2 -B, 3 –B, 4 –C, 5 –D , 6 –B, 7 –B, 8 – D, 9 –C, 10 –C**